ಡಾ. ಬ್ರಹ್ಮರ್ಷಿ ಪಿತಾಮಹ ಸುಭಾಷ್ ಪತ್ರೀಜಿ ಆಶೀರ್ವಾದಗಳೊಂದಿಗೆ

# ಗುರುವನ್ನು ಗುರುತಿಸುವುದು ಹೇಗೆ?

ತಟವರ್ತಿ ವೀರರಾಘವರಾವ್

ಅನುವಾದ : ಉಮಾ ಲೋಕೇಶ್
ಹೆಚ್. ಎನ್. ಶ್ರೀನಿವಾಸ



# ಗುರುವನ್ನು ಗುರುತಿಸುವುದು ಹೇಗೆ?

**ತಟವರ್ತಿ ವೀರರಾಘವರಾವು**

**ಕನ್ನಡ ಅನುವಾದ : ಉಮಾ ಲೋಕೇಶ್**
**ಹೆಚ್. ಎನ್. ಶ್ರೀನಿವಾಸ**

**ಶ್ರೀರಾಮ ಪಬ್ಲಿಕೇಶನ್ಸ್**
ಶ್ರೀ ರಾಮಧಾಮ ಪಿರಮಿಡ್ ಧ್ಯಾನಕೇಂದ್ರ,
ನಾರಾಯಣಪ್ಪಗಾರ್ಡನ್, ವೈಟ್‌ಫೀಲ್ಡ್, ಬೆಂಗಳೂರು – 560 066

---

**ಪಿರಮಿಡ್ ವ್ಯಾಲಿ ಇಂಟರ್‌ನ್ಯಾಷನಲ್**
ಕೆಬ್ಬೆದೊಡ್ಡಿ ಗ್ರಾಮ, ಹಾರೋಹಳ್ಳಿ ಹೋಬಳಿ, ಕನಕಪುರ ರಸ್ತೆ, ಬೆಂಗಳೂರು

**Guruvannu Guruthisuvudu Hege**

Edited & Published by **Srirama Publications,**
Sri Ramadhama Pyaramid Dyanakendra, Narayanappa Garden, Whitefiled, Bangalore - 560 066.
**M.: 9449695503, 8050082689**

| | | |
|---|---|---|
| ಮೊದಲನೇ ಮುದ್ರಣ | : | 2024 |
| ಹಕ್ಕುಗಳು | : | ಪ್ರಕಾಶಕರು |
| ಪ್ರಕಾಶಕರು | : | **ಶ್ರೀರಾಮ ಪಬ್ಲಿಕೇಶನ್ಸ್**<br>ಶ್ರೀ ರಾಮಧಾಮ ಪಿರಮಿಡ್ ಧ್ಯಾನಕೇಂದ್ರ,<br>ನಾರಾಯಣಪ್ಪಗಾರ್ಡನ್, ವೈಟ್‌ಫೀಲ್ಡ್,<br>ಬೆಂಗಳೂರು – 560 066<br>ಮೊ.: 9449695503, 8050082689 |
| ಬಳಸಿದ ಕಾಗದ | : | 70 ಜಿ.ಎಸ್.ಎಂ. ಮ್ಯಾಪಲಿಥೊ ಡೆಮಿ 1/8 |
| ಪ್ರತಿಗಳು | : | 1000 |
| ಬೆಲೆ | : | 30/– |
| ಪುಟಗಳು | : | iv+28=32 |
| ಮುಖಪುಟ | : | ಚಂದ್ರಕಾಂತ ಪಟ್ಟಣ |
| ಅಕ್ಷರ ಜೋಡಣೆ | : | **ನಿರಂತರ ಸಾಯಿ ಕಮ್ಯೂನಿಕೇಷನ್ ಪ್ರೈ .ಲಿ**<br>ಮೊ: 96328 12541 |

ಮುದ್ರಣ :

**ಪೂರ್ಣಾ ಗ್ರಾಫಿಕ್ಸ್,**

ಬೆಂಗಳೂರು 9844167475

# ಪರಿವಿಡಿ

1. ಗುರುವನ್ನು ಗುರುತಿಸುವುದು ಹೇಗೆ? 1
2. ಗುರುವೆಂದರೆ? 2
3. ವಿವಿಧ ಗುರುಗಳು 5
4. ಗುರು ಕೃಪೆ ಇದ್ದರೆ 7
5. ಗುರುವಿನ ಕುರಿತು 9
6. ಆಶ್ರಮಗಳು 11
7. ವಿವಿಧ ಗುರುಗಳು! 12
8. ಶಿಷ್ಯನೆಂದರೆ? 18
9. ಗುರುಗಳ ಕೋಪ! 21

## ಅನುಬಂಧ – ಪತ್ರೀಜಿ ಸಂದೇಶಗಳು

1. "ಯಾವಾಗಲೂ ಗುರುಗಳು ಇರುತ್ತಾರೆ"
2. "ಗುರು – ಲಘು "
3. "ಮೂಢಭಕ್ತ – ಶಿಷ್ಯ"
4. "ಗುರು – ಪರಮ ಗುರು"

# ಸ್ವ-ಪರಿಚಯ

ನನ್ನ ಹೆಸರು ಎಚ್.ಎನ್.ಶ್ರೀನಿವಾಸ. ವೃತ್ತಿಯಲ್ಲಿ ಸಿವಿಲ್ ಇಂಜಿನಿಯರ್. ಪದವಿ ಪಡೆದ ಆರಂಭದಲ್ಲಿ, ಮೂರು ವರ್ಷಗಳ ಕಾಲ ಸರ್ಕಾರಿ ಉದ್ಯೋಗದಲ್ಲಿ ಕೆಲಸ ಮಾಡಿದ ನಂತರ, ಆ ಉದ್ಯೋಗದಲ್ಲಿ ನಿರಾಸಕ್ತಿ ಹೊಂದಿದ ನಾನು, 1990ರಲ್ಲಿ ನನ್ನ ಸ್ವಂತ ವ್ಯವಹಾರವನ್ನು ಪ್ರಾರಂಭಿಸಿದೆ. ನನ್ನ ಆಧ್ಯಾತ್ಮಿಕ ಪ್ರಯಾಣವು 1999ರಲ್ಲಿ ಎಸ್.ಎಸ್.ವೈ. ಅಂದರೆ, ಸಿದ್ಧಸಮಾಧಿ ಯೋಗ ಗುರೂಜಿಯವರಿಂದ ಪ್ರಾರಂಭವಾಯಿತು. 2004ರಲ್ಲಿ ವೀರಾಂಜನೇಯ ದೇವಾಲಯವನ್ನು ಬೆಂಗಳೂರಿನ ವೈಟ್‌ಫೀಲ್ಡ್‌ನಲ್ಲಿ ನಿರ್ಮಿಸಲಾಯಿತು. ಎಲ್ಲಾ ಆಚರಣೆಗಳು ದೇವಾಲಯದಲ್ಲಿ ನಿಯಮಿತವಾಗಿ ನಡೆಯುತ್ತಿದ್ದವು. ಆಧ್ಯಾತ್ಮದ ಬಗ್ಗೆ ನನಗೆ ಒಲವು ಹೆಚ್ಚಾದಂತೆ ನಾನು ಮತ್ತು ನನ್ನ ಪತ್ನಿ ಎಸ್.ಎನ್.ವಿಜಯಲಕ್ಷ್ಮಿ ಸೇರಿ 2008ರಲ್ಲಿ ನಾವು ದೇವಾಲಯದ ಪಕ್ಕದಲ್ಲಿ 'ಶ್ರೀ ರಾಮಧಾಮ ಧ್ಯಾನ ಮಂದಿರ' ಎಂಬ ಹೆಸರಿನ ಒಂದು ಧ್ಯಾನ ಮಂದಿರವನ್ನು ನಿರ್ಮಿಸಿದೆವು. ಇದನ್ನು ಸಿದ್ಧಸಮಾಧಿ ಯೋಗ ಸಂಸ್ಥಾಪಕರಾದ ಡಾ.ಋಷಿ ಪ್ರಭಾಕರ್ ಗುರೂಜಿಯವರು ಉದ್ಘಾಟಿಸಿದರು. ಅಲ್ಲಿ ಎಸ್.ಎಸ್.ವೈ. ಶಿಕ್ಷಕರಿಂದ ಸಾಮೂಹಿಕ ಧ್ಯಾನ ತರಬೇತಿಗಳನ್ನು ಆಯೋಜಿಸುತ್ತಿದ್ದೆವು. 2009ರಲ್ಲಿ ಬ್ರಹ್ಮರ್ಷಿ ಪಿತಾಮಹ ಡಾ.ಸುಭಾಷ್ ಪತ್ರೀಜಿಯವರು ಧ್ಯಾನ ಅಧಿವೇಶನಕ್ಕಾಗಿ ಶ್ರೀರಾಮಧಾಮ ಕೇಂದ್ರಕ್ಕೆ ಭೇಟಿ ನೀಡಿದಾಗ 'ಆನಾಪಾನಸತಿ ಧ್ಯಾನ ವಿಧಾನ'ವನ್ನು ಪರಿಚಯ ಮಾಡಿಸಿದರು. ಪತ್ರೀಜಿಯವರನ್ನು ಭೇಟಿಯಾದ ನಂತರ, ದಿನನಿತ್ಯದ ನನ್ನ ಆಧ್ಯಾತ್ಮಿಕ ಅಭ್ಯಾಸದ ಕಾಲಾವಧಿಯನ್ನು ಹೆಚ್ಚಿಸಿದೆ. ಪಿ.ಎಸ್.ಎಸ್.ಎಂ.ನ ತತ್ವಸಿದ್ಧಾಂತದಲ್ಲಿ ಗುರು–ಶಿಷ್ಯರ ಕುರಿತಾದ ಒಂದು ಪ್ರಮುಖವಾದ ಅಂಶವು ನನ್ನ ಗಮನ ಸೆಳೆಯಿತು. 'ಯಾರೂ ಶಾಶ್ವತವಾಗಿ ಗುರುಗಳಲ್ಲ, ಯಾರೂ ಶಾಶ್ವತವಾಗಿ ಶಿಷ್ಯರೂ ಅಲ್ಲ, ಅವರಿಗೆ ಅವರೇ ಗುರುಗಳು. ಮಾಸ್ಟರ್ ಆಗಿ ಬದುಕಲು ಕಲಿಯಿರಿ, ಎಂದಿಗೂ ಶಿಷ್ಯರಾಗಿಯೇ ಇರಬೇಡಿ' ಎಂಬ ಪತ್ರೀಜಿಯವರ ಮಾತುಗಳು ಆಧ್ಯಾತ್ಮದಲ್ಲಿ ನನ್ನ ಆಸಕ್ತಿಯನ್ನು ಹೆಚ್ಚಿಸಿತು. 2013ರಲ್ಲಿ ಪತ್ರೀಜಿಯವರು ನನಗೆ ಪಿರಮಿಡ್ ವ್ಯಾಲಿ ಇಂಟರ್‌ನ್ಯಾಷನಲ್ ಟ್ರಸ್ಟ್‌ನಲ್ಲಿ ಒಬ್ಬ ಟ್ರಸ್ಟಿಯಾಗಿ ಸೇವೆ ಮಾಡುವ ಸದವಕಾಶವನ್ನು ಒದಗಿಸಿದರು.

ಇದರಲ್ಲಿ ನನಗೆ 'ನಿತ್ಯಅನ್ನದಾನ ಸೇವೆ'ಯ ಜವಾಬ್ದಾರಿಯನ್ನು ವಹಿಸಲಾಯಿತು. ಪ್ರತಿಯೊಬ್ಬ ಮಾನವನು ಮಾಧವನಾಗಬೇಕಾದರೆ ಪ್ರತಿನಿತ್ಯವೂ ಶ್ರದ್ಧೆ, ಆಸಕ್ತಿಯಿಂದ ಧ್ಯಾನಾಭ್ಯಾಸ ಮಾಡಬೇಕು. ಅದರ ಜೊತೆಯಲ್ಲಿ 'ಸಸ್ಯಾಹಾರ', 'ಸ್ವಾಧ್ಯಾಯ', 'ಸಜ್ಜನ–ಸಾಂಗತ್ಯ, ಅಂದರೆ, ಸತ್ಸಂಗ' ಹಾಗೂ 'ಪಿರಮಿಡ್ ಶಕ್ತಿ ಬಳಕೆ' ಅವಶ್ಯಕ ಎಂದು ಆಧ್ಯಾತ್ಮಶಾಸ್ತ್ರ ತಿಳಿಸುತ್ತದೆ. ನಿರಂತರ, ಸಾಧನೆಯಿಂದ ಶಾರೀರಿಕ ಆರೋಗ್ಯ, ಮಾನಸಿಕ ಪ್ರಶಾಂತತೆ, ಬುದ್ಧಿ–ವಿಕಾಸ, ಆನಂದದ ಜೀವನ, ಆತ್ಮಜ್ಞಾನ ಮುಂತಾದವುಗಳು ಲಭಿಸುವುದು. ಹೊಸ ಯುಗದ ಆಧ್ಯಾತ್ಮ ಸಾಹಿತ್ಯವನ್ನು ಸ್ವಾಧ್ಯಾಯಕ್ಕಾಗಿ ಪ್ರಕಟಿಸುವ ಹಿನ್ನೆಲೆಯಲ್ಲಿ 'ಶ್ರೀರಾಮ ಪಬ್ಲಿಕೇಶನ್ಸ್' ಹೆಸರಿನ ಪುಟ್ಟ ಪ್ರಕಾಶನ ಸಂಸ್ಥೆಯನ್ನು ಆರಂಭಿಸಲಾಯಿತು. ಪತ್ರೀಜಿಯವರ ಮತ್ತು ತಟವರ್ತಿ ವೀರರಾಘವರಾವ್ ರವರ ಆದೇಶದ ಮೇರೆಗೆ ನಮ್ಮ ಪ್ರಕಾಶನದ ವತಿಯಿಂದ ಕೆಲವು ಆಧ್ಯಾತ್ಮಿಕ ಪುಸ್ತಕಗಳನ್ನು ಪ್ರಕಟಿಸಲಾರಂಭಿಸಿದೆವು. ಕೆಲವು ಪುಸ್ತಕಗಳನ್ನು ಕನ್ನಡಕ್ಕೆ ಅನುವಾದಿಸಿ ಮುದ್ರಿಸಲಾಯಿತು. ಕೆಲವು ತೆಲುಗು ಪುಸ್ತಕಗಳನ್ನು ಮರುಮುದ್ರಣ ಮಾಡಲಾಯಿತು. ತೆಲುಗಿನ ಉತ್ತಮ ಪುಸ್ತಕಗಳು ಕನ್ನಡದ ಆಧ್ಯಾತ್ಮ ಸಾಧಕರಿಗೂ ದೊರಕಲೆಂದು ನಾವು ಇಂತಹ ಪ್ರಯತ್ನ ಮಾಡಿದ್ದೇವೆ.

ತಮ್ಮ ವಿಶ್ವಾಸಿಗಳು,

**ಎಚ್.ಎನ್.ಶ್ರೀನಿವಾಸ** ಮತ್ತು

**ಎಸ್.ಎನ್.ವಿಜಯಲಕ್ಷ್ಮಿ ಸಂಸ್ಥಾಪಕರು,** ಶ್ರೀರಾಮಧಾಮ ಧ್ಯಾನಕೇಂದ್ರ

# ಗುರುವನ್ನು ಗುರುತಿಸುವುದು ಹೇಗೆ?

ದಕ್ಷಿಣಾಮೂರ್ತಿಯು, ಸನಕನಂದಾದಿಗಳಿಗೆ ಮೌನದಿಂದಲೆ ಜ್ಞಾನೋದಯ ವಾಗುವಂತೆ ಮಾಡಿ ಆತ್ಮಾನಂದವನ್ನು ಉಂಟುಮಾಡಿದಂತೆ... ಗುರುವು ಆತ್ಮಜ್ಞಾನದೊಂದಿಗೆ ಶುದ್ಧ ಚೈತನ್ಯವಾದ ಪರಬ್ರಹ್ಮ ಸಾಧಕನಾಗಿ ಇರುವಂತೆ ಮಾಡಬಲ್ಲನು.

ಮುಮುಕ್ಷುಗಳು ಸಾಗರದಲ್ಲಿರುವ ಮುತ್ತಿನ ಚಿಪ್ಪಿನಂತಹವರು, ಗುರುವು, ಅದರಲ್ಲಿ ಬೀಳುವ ಮಳೆಯ ಹನಿಯಂತೆ ...ಚಿಪ್ಪಿನಲ್ಲಿ ಬಿದ್ದ ಮಳೆಯ ಹನಿ  ಸ್ವಾತಿ ಮುತ್ತಿನಂತೆ ಆಗುವುದಲ್ಲವೇ...

ಮಳೆಯ ನೀರಿನಲ್ಲಿ ಒಂದು ಹನಿಯಿಂದ ದಾಹ ತಿರುವುದು.  ಆದರೆ, ಉಪ್ಪು ನೀರು ಸಮುದ್ರದಲ್ಲಿ ತುಂಬಿದ್ದರೂ, ಏನು ಪ್ರಯೋಜನವಿಲ್ಲ ಆದ್ದರಿಂದ ಮಳೆಯ ನೀರಿನಂತೆ ಉನ್ನತವಾದವನು ಗುರುವು.

# ಗುರುವೆಂದರೆ?

ಮೊದಲು ಗುರು ಎನ್ನುವ ಪದಕ್ಕೆ ಅರ್ಥವನ್ನು ತಿಳಿದುಕೊಳ್ಳೋಣ.

1. 'ಗು' ಎಂದರೆ ಅಂಧಕಾರ 'ರು' ಎಂದರೆ ಜ್ಯೋತಿ ಸ್ವರೂಪ. ಅಂಧಕಾರವನ್ನು ಅಂದರೆ ಅಜ್ಞಾನವನ್ನು ಹೋಗಲಾಡಿಸುವ ಜ್ಯೋತಿ ಸ್ವರೂಪವೇ ಗುರು ಎಂದು ಅರ್ಥ ಇದಕ್ಕೆ ಮತ್ತೊಂದು ಅರ್ಥವೂ ಇದೆ.

2. 'ಗು' ಎಂದರೆ ಗುಣಾತೀತ 'ರು' ಎಂದರೆ ರೂಪ ವರ್ಜಿತ. ( ರಹಿತ )ಗುಣ, ರೂಪರಹಿತವಾದ ಪರಬ್ರಹ್ಮ ಸ್ವರೂಪ ಗುರು ಎಂದೂ ಹೇಳುತ್ತಾರೆ. ಮತ್ತೊಂದು ಅರ್ಥವನ್ನು ಹೇಳಿಕೊಳ್ಳಬಹುದು.

3. 'ಗು' ಎಂದರೆ 'ಅಜ್ಞಾನ'.... 'ರು' ಎಂದರೆ ಜ್ಞಾನ. ಅಜ್ಞಾನಾಂಧಕಾರವನ್ನು ಹೋಗಲಾಡಿಸಿ ಜ್ಞಾನವನ್ನು ಪ್ರಸಾದಿಸುವವನು 'ಗುರು' ಎಂದು ಸಹ ಹೇಳುವರು.

## ಉತ್ತಮ ಗುರುವಿನ ಅರ್ಹತೆಗಳು

1. ಗುರು ಜ್ಞಾನಿಯಾಗಿರಬೇಕು. ಜ್ಞಾನ ಅಂದರೆ ವಿಷಯ ಪರಿಜ್ಞಾನ, ಪಾಂಡಿತ್ಯವಲ್ಲ, ಸ್ವಯಂ ಪ್ರತಿಭೆ, ಪ್ರಜ್ಞೆಯುಳ್ಳವನಾಗಿರಬೇಕು.

2. ಗುರುವು ಕರ್ಮಿಷ್ಟ ನಾಗಿರಬೇಕು ಅಂದರೆ ಕರ್ಮಗಳನ್ನು ಆಚರಿಸುತ್ತಾ ಇರಬೇಕು ಹೊರತು, ಸನ್ಯಾಸಿ ವಿರಾಗಿಯಾಗಿರಬಾರದು.

3. ಗುರು ಜ್ಞಾನ ತತ್ಪರನಾದ ಯೋಗಿಯಾಗಿರಬೇಕು. ಅಂದರೆ ಫಲಿತಗಳನ್ನು ಆಶಿಸದೆ ಕರ್ಮಗಳನ್ನು ಆಚರಿಸಬೇಕು, ಅಂದರೆ ನಿಜವಾದ ಕರ್ಮಯೋಗಿ ಆಗಿರಬೇಕು.

ಈ ಮೂರು ಗುಣಗಳು ಇರದವನು ಗುರು ಪದವಿಗೆ ಅರ್ಹನಲ್ಲ.. ಢಂಬಾಚಾರವನ್ನು ಮಾಡುತ್ತಾ ಆಡಂಬರವಾಗಿ ಜೀವಿಸುವವರು, ಅವತಾರ ಪುರುಷ ಎಂದು ಬೀಗುವವರು ಸದ್ಗುರುಗಳಾಗಲಾರರು.

ಆದ್ದರಿಂದ ಗುರುವಾದವನು, ಸ್ವಯಂ ಸಾಧಕನಾಗಿ ಇರಬೇಕು ಸಾಧನೆಯಲ್ಲಿ ಇರುವ ಕಷ್ಟ ಸುಖಗಳು ಅನುಭವಿಸಿದವನಾಗಿರಬೇಕು. ಬ್ರಹ್ಮಾನುಭೂತಿಯನ್ನು ರುಚಿ ನೋಡಿರಬೇಕು. ಪ್ರಜ್ಞಶಾಲಿಯಾಗಿರಬೇಕು,ಅಂತಹ ಗುರುವು ಮಾತ್ರವೇ ಇತರರಿಗೆ ಮಾರ್ಗದರ್ಶಿ ಆಗಬಲ್ಲನು. ಇತರರಿಗೆ ಒಳ್ಳೆ ಮಾರ್ಗವನ್ನು ತೋರಿಸಬಲ್ಲನು.

ಅಂತಹ ಗುರು ಮಹಾತ್ಮನಾಗಿರಬೇಕು, ಕರ್ಣ ಹೃದಯ ನಾಗಿರಬೇಕು ಆತನ ಅಂತರಂಗ ಕರುಣರಸ ಪೂರಿತವಾಗಿರಬೇಕು ತನ್ನ ಶಕ್ತಿಯೊಂದಿಗೆ ಶಿಷ್ಯನನ್ನು ಭವಬಂಧಗಳಿಂದ ಮುಕ್ತನಾಗಿಸಬೇಕು.

ಅಂತಹ ಗುರುವೇ ಜ್ಞಾನ ನಿಧಿ, ತತ್ವ ನಿಧಿ ಏಕೆಂದರೆ ಜ್ಞಾನ, ಆತ್ಮಜ್ಞಾನ ಎಷ್ಟು ಜನರಿಗೆ ಹಂಚಿದರೂ ಕ್ಷೀಣಿಸುವುದಿಲ್ಲ. ಅಂತಹ ಸತ್ಯವನ್ನು ತಿಳಿದುಕೊಳ್ಳಬಲ್ಲವನೇ ಗುರು.

ಯಾವ ತಾತ್ವಿಕ ವಿಷಯವನ್ನಾದರೂ ತಡ ಬಡಿಸದೇ, ಆಲೋಚಿಸದೇ ವಿವರಿಸಿ ಹೇಳಬಲ್ಲವನಾಗಿರಬೇಕು. ಆತನಿಗೆ ಆ ವಿಷಯಗಳು ಅಷ್ಟಕ್ಕೂ ಮೊದಲು ತಿಳಿಸಿ ತಿಳಿದಿರಬಹುದು ಸಂದರ್ಭ ಅನುಸಾರವಾಗಿ ಆತನಿಗೆ ಮನಸ್ಸಿನಲ್ಲಿ ಸ್ಫುರಿಸುತ್ತದೆ ಅದೇ ಪ್ರಜ್ಞಾ ವಿಶೇಷ.

ಗುರುವಿನದು ಅನುಭವ ಜ್ಞಾನ, ಪ್ರತ್ಯಕ್ಷ ಜ್ಞಾನ ಅದಕ್ಕೆ ಮೀರಿದ ಜ್ಞಾನ ಇಹಲೋಕದಲ್ಲಿ ಶಾಸ್ತ್ರ ಪಠಣದಿಂದ ಆಗಲಿ,ಪಾಂಡಿತ್ಯದಿಂದಾಗಲಿ ಲಭಿಸುವುದಿಲ್ಲ. ಅದಕ್ಕೆ ಅನುಭವವನ್ನು ಮೀರಿದ ಪ್ರಮಾಣ ಯಾವುದೂ ಇಲ್ಲ ಎನ್ನುತ್ತಾರೆ. ಗುರುವು ಅನುಭವದೊಂದಿಗೆ ಹೇಳುತ್ತಾನೆ. ಶಾಸ್ತ್ರವು ಯಾವಾಗಲೂ ಪ್ರಮಾಣ ಎನಿಸುವುದಿಲ್ಲ. ಶಾಸ್ತ್ರ ಪ್ರಮಾಣ ಶಿಷ್ಯನಿಗೆ ಅನುಭವಕ್ಕೆ ಬರದೇ ಇರುವಾಗ ಅದನ್ನು ಬಿಟ್ಟುಬಿಡಬೇಕು. ಆಗ ಗುರು ಅನುಭವವೆ ಪ್ರಮಾಣ ಎನಿಸುತ್ತದೆ. ತರ್ಕ ಮಾಡಬಾರದು. ಅನುಭವ ಜ್ಞಾನದಿಂದ ಗುರು ಬೋಧಿಸಿದ ವಿಷಯಗಳನ್ನು ಗ್ರಹಿಸಿ, ಉಪದೇಶಿಸಿದ ಮಾರ್ಗದಲ್ಲಿ ನಡೆಯಬೇಕು ಹಾಗೆ ಗುರು ತೋರಿಸಿದ್ದನ್ನು ಸಾಧನೆ ಮಾಡಿದಾಗಲೇ ಜನ್ಮ ಪರಂಪರೆಯಿಂದ ವಿಮುಕ್ತಿ ಹೊಂದುವುದು ಸಾಧ್ಯವಾಗುತ್ತದೆ.

ನಾವು ಪುಣ್ಯಕ್ಕಾಗಿ, ಪುರುಷಾರ್ಥಕ್ಕಾಗಿ ಸಮುದ್ರ ಸ್ನಾನಗಳು, ನದಿ ಸ್ನಾನಗಳು ಮಾಡುತ್ತಿರುತ್ತೇವೆ. ಗುಡಿ ಗೋಪುರಗಳನ್ನು ದರ್ಶಿಸಿ, ಪುಷ್ಕರಣಿ ಸ್ನಾನಗಳನ್ನು ಮಾಡಿ.. ವಿಗ್ರಹದರ್ಶನ ಮಾಡುತ್ತಿರುತ್ತೇವೆ. ಸಪ್ತಸಾಗರದಾದ್ಯಂತ ವ್ಯಾಪಿಸಿರುವ ಭೂಭಾಗದಲ್ಲಿ ಎಲ್ಲಾ ನದಿಗಳಲ್ಲಿಯೂ ಸ್ನಾನ ಮಾಡುವುದರಿಂದ ಹೊಂದುವ ಪುಣ್ಯಕ್ಕಿಂತ ಆತ್ಮಾಭಿವೃದ್ಧಿಯೇ ಮಿಗಲಾದದ್ದು ಎಂದು ತಿಳಿದುಕೊಳ್ಳಬೇಕು. ಅದು ಸದ್ಗುರುವಿನ ಬೋಧನೆಯಿಂದಲೇ ಸಾಧ್ಯ.

ವೇದಗಳು ಪಟಿಸುವ ಘನಪಾಠಿಗಳಿಗಾಗಲಿ, ಉಪನಿಷತ್ತುಗಳನ್ನು ಕಂಟಸ್ಥಗೊಳಿಸಿ ಹೇಳಿದರೂ, ಜ್ಞಾನ ಬರುವುದಿಲ್ಲ ಅಷ್ಟೇ ಅಲ್ಲ ಕಷಾಯವನ್ನು ಧರಿಸಿ ಇರೋ ಮುಂಡನವನ್ನು ಮಾಡಿಸಿಕೊಂಡು ಮಠಗಳಲ್ಲಿ ಇದ್ದರೂ ಜ್ಞಾನೋದಯ ಆಗುವುದಿಲ್ಲ.

ಈ ವಿಷಯವಾಗಿ ಶಂಕರಾಚಾರ್ಯರು ಏನು ಹೇಳಿದ್ದಾರೆ ಎಂದರೆ,

**ಜಟಿಲೋ ಮುಂಡಿ ಲುಂಚಿತ ಕೇಶಃ**

**ಕಾಷಾಯಾಂಬರ ಬಹುಕೃತವೇಷಃ ಪಶ್ಯನ್ನಪಿ ಪಶ್ಚತಿ ಮೂಢೋ**

**ಉದರ ನಿಮಿತ್ತಂ ಬಹುಕೃತವೇಷಃ**

ತಾತ್ಪರ್ಯ:– ಜುಟ್ಟನ್ನು ಜಡೆಗಳಾಗಿ ಮಾಡಿಕೊಳ್ಳುವುದರಿಂದ, ತಲೆಯನ್ನು ನುಣ್ಣಗೆ ಬೋಳಿಸಿಕೊಳ್ಳುವುದರಿಂದ, ಕಾಷಾಯ ವಸ್ತ್ರಗಳನ್ನು ಧರಿಸುವುದರಿಂದ ಯಾವ ಲಾಭವೂ ಇಲ್ಲ. ಇದೆಲ್ಲಾ ಹೊಟ್ಟೆಪಾಡಿಗಾಗಿ ಹೀಗೆ ವೇಷಗಳನ್ನು ಹಾಕುತ್ತಿದ್ದಾರೆ. ಆದರೆ ಜ್ಞಾನೋದಯ ಹೊಂದಲು ಮಾತ್ರ ಪ್ರಯತ್ನಿಸುತ್ತಿಲ್ಲ.

ಸತ್ಯವಾದ ಬ್ರಹ್ಮವು ಮನಸ್ಸನ್ನು ದಾಟಿದ ನಂತರ ಮಾತ್ರ ದ್ಯೋತಕವಾಗುತ್ತದೆ. ಮನಸ್ಸಿನಿಂದ ಅದನ್ನು ತಿಳಿದುಕೊಳ್ಳಲಾರೆವು. ಬ್ರಹ್ಮ ಎಂದರೆ ಭಗವಂತ. ಆತ, ನಿರ್ಗುಣ ನಿರಾಮಯ, ನಿರಂಜನ ಆದ್ದರಿಂದ ಅದನ್ನು ತಿಳಿದುಕೊಳ್ಳಲು ಜ್ಞಾನವು ಸಾಕಾಗುವುದಿಲ್ಲ ಪ್ರಜ್ಞೆ ಇರಬೇಕು. ಅದು ಸದ್ಗುರುವಿನಿಂದಲೇ ಸಾಧ್ಯ. ಅವರು ನೀಡಿದ ಸಾಧನದಿಂದಲೇ ಸಾಧ್ಯ .

ಅಂಧನು ಸೂರ್ಯೋದಯವನ್ನು ನೋಡದಿರುವಂತೆ, ಮೂಢನು, ಗುರುವಿನ ರೂಪವನ್ನು, ಗುರುವಿನ ತತ್ವವನ್ನು ಅರ್ಥಮಾಡಿಕೊಳ್ಳಲಾರನು. ತುಂಬಾ ಜನರು ಅಜ್ಞಾನದಿಂದ ಅಲ್ಲದೆ ಅಹಂಭಾವದಿಂದಲೂ ಗುರುಗಳಿಗೆ ದೂರವಾಗುತ್ತಾರೆ.

ಸಾಧಕನು ರೂಪ ಧ್ಯಾನವನ್ನು ಬಿಟ್ಟು, ಅರೂಪ ಸ್ಥಿತಿಗೆ ಸೇರಿ.. ನಿರ್ಗುಣೋಪಾಸನೆ ಮಾಡಿ, ರೂಪಾ ತೀತವಾದ ಪರಬ್ರಹ್ಮ ತತ್ವವನ್ನು ಗ್ರಹಿಸಬೇಕೆಂದಾಗ , ಗುರುವು ಸಹಕಾರವನ್ನು ನೀಡುತ್ತಾನೆ. ಅದಕ್ಕೆ ಸದ್ಗುರುವನ್ನು ಆಶ್ರಯಿಸಬೇಕು ಎಂದಿದ್ದಾರೆ.

ನಿಜಕ್ಕೂ ಗುರುಗಳು ನಮಗೆ ಉಪದೇಶಿಸುವುದಿಲ್ಲ... ನಾವು ಏನೆಂದು ನಮಗೆ ನೆನಪಿಸುತ್ತಾರೆ. ಕಣ್ಣು ತೆರೆಸುತ್ತಾರೆ. ಅದಕ್ಕಿಂತ ಅವರು ಮತ್ತೇನೂ ಮಾಡುವುದಿಲ್ಲ.

# ವಿವಿಧ ಗುರುಗಳು

ಬೋಧಿಸುವವರೆಲ್ಲರೂ ಗುರುಗಳೇ, ಆದರೆ ಒಂದೇ ಹಂತದಲ್ಲಿ ಇರುವುದಿಲ್ಲ. ಶಾಸ್ತ್ರಗಳಲ್ಲಿ ಗುರುಗಳನ್ನು ಏಳು ವಿಧಗಳಾಗಿ ವಿಭಜಿಸುತ್ತಾರೆ.

(1) ಸೂಚಕ ಗುರು:– ಲೌಕಿಕವಾದ ಪ್ರಾಪಂಚಿಕ ವಿದ್ಯೆಯನ್ನು ಕಲಿಸುವ ಗುರುವನ್ನು ಸೂಚಕ ಗುರು ಎನ್ನುತ್ತಾರೆ.

(2) ವಾಚಕ ಗುರು:– ವರ್ಣಾಶ್ರಮ ವಿಷಯಗಳಿಗೆ ಸಂಬಂಧಿಸಿದ ವಿದ್ಯೆಯನ್ನು, ಧರ್ಮ ಅಧರ್ಮ ವಿದ್ಯೆಯನ್ನು ಬೋಧಿಸುವ ಗುರುವಿಗೆ ವಾಚಕ ಗುರು ಎಂದು ಹೇಳುತ್ತಾರೆ.

(3) ಕುಲ ಗುರು:– ಪಂಚಾಕ್ಷರಿ ಮೊದಲಾದ ಮಂತ್ರಗಳನ್ನು ಉಪದೇಶಿಸುವ ಗುರುವನ್ನು, ಕುಲ ಗುರು ಎನ್ನುತ್ತಾರೆ. ಇವರು ಮತ ಸಾಂಪ್ರದಾಯಗಳನ್ನು ಬೋಧಿಸುತ್ತಾರೆ. ಆದ್ದರಿಂದ ಅವರಿಗೆ ಕುಲಗುರು ಎನ್ನುತ್ತಾರೆ.

(4) ನಿಷಿದ್ಧ ಗುರು:– ಮಾಟ, ಭೂತ– ಪ್ರೇತ ಪಿಶಾಚಿಗಳು ಮತ್ತು ಮೊದಲಾದ ಮಂತ್ರಗಳನ್ನು ಉಪದೇಶಿಸುವ ಗುರುವನ್ನು ನಿಷಿದ್ಧ ಗುರು ಎನ್ನುತ್ತಾರೆ.

(5) ವಿಹಿತ ಗುರು:– ಸಂಸಾರವನ್ನು ಅನಿತ್ಯವೆಂದು ಹೇಳಿ, ಅದಕ್ಕೆ ವೈರಾಗ್ಯ ಮಾರ್ಗವನ್ನು ಬೋಧಿಸುವವರನ್ನು ವಿಹಿತ ಗುರು ಎನ್ನುತ್ತಾರೆ.

(6) ಕಾರಣ ಗುರು:– ಅಹಂ ಬ್ರಹ್ಮಾಸ್ಮಿ, ತತ್ವಮಸಿಯಂತಹ ಮಹಾ ವಾಕ್ಯಗಳನ್ನು ಬೋಧಿಸುವ, ದುಃಖ ನಿವಾರಣಾ ಮಾರ್ಗವನ್ನು ಬೋಧಿಸುವವರನ್ನು ಕಾರಣ ಗುರುವು ಎನ್ನುತ್ತಾರೆ.

(7) ಪರಮ ಗುರು :– ಸಮಸ್ತ ಸಂಶಯಗಳನ್ನು ಸಮೂಲವಾಗಿ ನಿರ್ಮೂಲನೆ ಮಾಡಿ, ಭಯವನ್ನು ಹೋಗಲಾಡಿಸಿ.. ಸಂಸಾರ ಬಂಧನದಿಂದ ಹೊರಬರುವ ಮೋಕ್ಷ ಮಾರ್ಗವನ್ನು ತೋರಿಸುವವರನ್ನು ಪರಮ ಗುರು ಎಂದು ಹೇಳುತ್ತಾರೆ.

ಈ ಪರಮ ಗುರು ಆಧ್ಯಾತ್ಮಿಕ ಶಿಖರಗಳನ್ನು ಸೇರಿಕೊಂಡವರು. ಇವರು ಎಂತಹ ಮಹಾಜ್ಞಾನಿಗಳಾದರೂ, ಎಂತಹ ಮಹಾಯೋಗಿಗಳಾದರೂ, ಲೋಕದಲ್ಲಿ ಅತಿ ಸಾಮಾನ್ಯವಾಗಿ ಜೀವಿಸುತ್ತಿರುತ್ತಾರೆ. ತಮ್ಮ ಔನತ್ಯವನ್ನು ತೋರಿಸಿಕೊಳ್ಳುವುದಿಲ್ಲ.

ಪ್ರಚಾರವನ್ನು ಬಯಸುವುದಿಲ್ಲ. ಯಾವಾಗಲೂ ಲೋಕಕಲ್ಯಾಣಕ್ಕಾಗಿ ಶ್ರಮಿಸುತ್ತಾ ಇರುತ್ತಾರೆ... ಅನೇಕ ಜನ್ಮಗಳಲ್ಲಿ ಮಾಡಿದ ಪುಣ್ಯದಿಂದ ಇಂತಹ ಪರಮ ಗುರುಗಳು ಲಭಿಸುತ್ತಾರೆ. ಅಂತಹ ಪರಮ ಗುರುವನ್ನು ಹೊಂದಿದವರು, ಮತ್ತೆ ಸಂಸಾರ ಬಂಧನದಲ್ಲಿ ಬೀಳುವುದಿಲ್ಲ. ಆದ್ದರಿಂದ ಪರಮ ಗುರುವನ್ನು ಹೊಂದಲು ಪ್ರಯತ್ನ ಮಾಡಬೇಕು.

ಗುರುಗಳೆಲ್ಲರೂ ಸರ್ವಜ್ಞರಲ್ಲ, ಬ್ರಹ್ಮನುಭೂತಿಗಳು ಅಲ್ಲ, ಅವರಲ್ಲಿ ಜ್ಞಾನವಿಲ್ಲದವರು ಇರುತ್ತಾರೆ. ಸುಳ್ಳುಗಳನ್ನು ಹೇಳುವವರು ಇರುತ್ತಾರೆ. ಎಲ್ಲವೂ ತಮಗೆ ತಿಳಿದಿರುವಂತೆ ನಟಿಸುತ್ತಿರುತ್ತಾರೆ. ತಮ್ಮನ್ನು ತಾವು ಹೊಗಳಿಕೊಳ್ಳುತ್ತಿರುತ್ತಾರೆ ಕಾರಣಜನ್ಮರೆಂದು ಹೇಳಿಕೊಳ್ಳುತ್ತಾರೆ ಇಂಥವರು ಇತರರಿಗೆ ಕಲಿಸುವುದು ಏನು ಇರುವುದಿಲ್ಲ ಅಂತಹ ಗುರುಗಳಿಂದ ಪ್ರಯೋಜನವು ಇರುವುದಿಲ್ಲ.

ನದಿಯನ್ನು ದಾಟಲು ಶಿಲೆಯನ್ನು ಆಶ್ರಯಿಸುತ್ತೇವೆಯೇ..ಇಲ್ಲ. ಶಿಲೆಯನ್ನು ಆಧಾರ ಮಾಡಿಕೊಂಡು ನದಿ ದಾಟಲಾರೆವು, ಹಾಗೆಯೇ ಅನುಭವವಿಲ್ಲದ ಗುರುವನ್ನು ನಂಬಿ ಪ್ರಯೋಜನವಿರುವುದಿಲ್ಲ. ಯಾವ ಉದ್ದೇಶವು ಇಲ್ಲದವನು ಇತರರ ಜೀವನೋದ್ದೇಶ ಕಂಡುಕೊಳ್ಳುವ ಮಾರ್ಗವನ್ನು ಹೇಗೆ ಬೋಧಿಸಬಲ್ಲನು?

ಆದ್ದರಿಂದ, ಅಯೋಗ್ಯರು ಅಹಂಭಾವಿಗಳಾದ ಗುರುಗಳನ್ನು ಬಿಡುವುದು ಒಳ್ಳೆಯದು... ವೇಷಗಳು ಹಾಕಿ ಕಾಷಾಯಗಳನ್ನು ಧರಿಸಿ, ತಾವು ಪರಿಶುದ್ಧರಾದಂತೆ ನಟಿಸುತ್ತಾರೆ ಅಂತಹವರನ್ನು ಆಡಂಬರದ ಗುರುಗಳು ಎನ್ನುತ್ತಾರೆ.

ಅಂಥವರ ಶಿಷ್ಯತ್ವ ವಹಿಸುವುದು ಪ್ರಮಾದಕರ. ತಮಗೆ ಸಾಷ್ಟಾಂಗ ನಮಸ್ಕಾರವನ್ನು ಮಾಡದಿದ್ದರೆ ಆಗ್ರಹಿಸುವಂತಹ ಗುರುಗಳು ಇರುತ್ತಾರೆ. ಅವರದು ಮೇಕೆಯ ಗಾಂಭೀರ್ಯ, ಅಂತಹವರಿಂದ ಶಿಷ್ಯರಿಗೆ ಆಧ್ಯಾತ್ಮಿಕ ಅಭಿವೃದ್ಧಿ ಉಂಟಾಗುವುದಿರಲಿ, ಕಷ್ಟ ನಷ್ಟಗಳನ್ನು ಎದುರಿಸಬೇಕಾಗಿರುತ್ತದೆ. ಆದ್ದರಿಂದ, ಗುರುವನ್ನು ಆಯ್ಕೆ ಮಾಡಿಕೊಳ್ಳುವ ಮೊದಲೇ ಶಿಷ್ಯನು ಜಾಗ್ರತೆ ವಹಿಸಬೇಕು. 'ನೀನು ನನಗೆ ಶಿಷ್ಯ ನಾಗಬೇಕೆಂದು ಉತ್ತಮ ಗುರು  ಕೇಳಿಕೊಳ್ಳುವುದಿಲ್ಲ . ಸಾಧಕನೇ ಗುರುವನ್ನು ಆಯ್ಕೆ ಮಾಡಿಕೊಳ್ಳಬೇಕು.

ಸದ್ಗುರು ಉಪನಷತ್ತಿನಲ್ಲಿನ ಜ್ಞಾನವನ್ನು ತಿಳಿಸುತ್ತಾನೆ.  ಧ್ಯಾನ ಸಾಧನೆಯ ಮೂಲಕ ಜ್ಞಾನ ಅನುಭವಕ್ಕೆ ಬರುವಂತೆ ಮಾಡುತ್ತಾನೆ.

# ಗುರುಕೃಪೆ ಇದ್ದರೆ?

ಸದ್ಗುರು ಶಿಷ್ಯನನ್ನು ಸ್ವೀಕರಿಸಿದ ನಂತರ ಶಿಷ್ಯನನ್ನು ಜ್ಞಾನವಂತನಾಗಿ ಮಾಡಬೇಕೆಂದು, ಅನೇಕ ವಿಧವಾಗಿ ಪ್ರಯತ್ನಿಸುತ್ತಾನೆ. ಹಾಗೆಯೇ ಶಿಷ್ಯರನ್ನು ತನ್ನ ಹಾಗೆ ಮಾಡಲು ಪ್ರಯತ್ನಿಸುತ್ತಾನೆ. ಆ ವಿಧವಾಗಿ ಮಾಡಲು, ನಾಲ್ಕು ವಿಧಗಳ ದೀಕ್ಷೆಗಳ ಮೂಲಕ ಪ್ರಯತ್ನಿಸುತ್ತಾನೆ.

ಅವುಗಳು.... (1) ದೃಕ್ ದೀಕ್ಷೆ (2) ಸ್ಪರ್ಶ ದೀಕ್ಷೆ (3) ವಾಕ್ ದೀಕ್ಷೆ (4) ಮನೋದಿಕ್ಷೆ.

**(1) ದೃಕ್ ದೀಕ್ಷೆ :–** ಇದನ್ನೇ ಮತ್ಸ್ಯನ್ಯಾಯ ಎನ್ನುತ್ತಾರೆ . ಮೀನು ಮೊಟ್ಟೆಗಳನ್ನು ಹಾಕಿ ಹಿಂತಿರುಗಿ ಅದನ್ನೇ ತೀಕ್ಷ್ಣವಾಗಿ ನೋಡುತ್ತದೆ. ತಾಯಿಯ ದೃಷ್ಟಿ ಸೋಕಿದ ಕೂಡಲೇ ಮೊಟ್ಟೆಗಳು ಮರಿಗಳಾಗಿ ಬದಲಾಗುತ್ತವೆ.

ಹಾಗೆಯೇ ಸದ್ಗುರು ದೇವರ ಕರುಣಾಮೃತ ನೋಟವನ್ನು ಬೀರುವುದರಿಂದ ಮತ್ಸ್ಯ ಶಿಷ್ಯನು ಜ್ಞಾನಪರಿಪಕ್ವತೆಯನ್ನು ಹೊಂದುತ್ತಾನೆ. ಅಂದಿನಿಂದ ಅಜ್ಞಾನ ಜೀವನವನ್ನು ಬಿಟ್ಟು, ಜ್ಞಾನ ಜೀವಿಯಾಗಿ ಆತ್ಮವನ್ನು ದರ್ಶಿಸುತ್ತಾನೆ .

**(2) ಸ್ಪರ್ಶ ದೀಕ್ಷೆ :–** ಇದನ್ನೇ ವಿಹಂಗ ನ್ಯಾಯ ಎನ್ನುತ್ತಾರೆ. ಪಕ್ಷಿಯು ಮೊಟ್ಟೆಗಳನ್ನು ಇಟ್ಟು ಅದನ್ನು ಸಂರಕ್ಷಿಸಿ ತನ್ನ ರೆಕ್ಕೆಗಳ ಸ್ಪರ್ಶದಿಂದ ಮೊಟ್ಟೆಯನ್ನು ಮರಿಗಳಾಗಿ ಮಾಡುತ್ತದೆ. ಹಾಗೆಯೇ ಸದ್ಗುರು ತನ್ನ ದಿವ್ಯವರದ ಅಭಯ ಹಸ್ತದಿಂದ, ಸ್ಪರ್ಶದ ಮೂಲಕ ಶಿಷ್ಯನಿಗೆ ಆತ್ಮ ಜ್ಞಾನವನ್ನು ನೀಡುತ್ತಾನೆ.

**(3) ವಾಕ್ ದೀಕ್ಷೆ :–** ಇದನ್ನೇ ಭ್ರಮರ ಕೀಟ ನ್ಯಾಯವೆಂದು ಹೇಳುತ್ತಾರೆ. ಭ್ರಮರವು ಒಂದು ಕೀಟವನ್ನು ತಂದು ಗೂಡಿನಲ್ಲಿಟ್ಟು ದ್ವಾರದ ಬಳಿ ಶಬ್ದ ಮಾಡುತ್ತದೆ. ಅದನ್ನು ನೋಡುತ್ತಾ ಕೀಟ ತಾನೂ ಭ್ರಮರವಾಗಿ ಬದಲಾಗುತ್ತದೆ. ಮಕರಂದವನ್ನು ಸ್ವೀಕರಿಸುತ್ತದೆ.

ಹಾಗೆ ಸದ್ಗುರು ತನ್ನ ಮೃದು ಮಧುರವಾದ ವಾಕುಗಳೊಂದಿಗೆ ಬೋಧನೆ ಮಾಡುತ್ತಾ ಶಿಷ್ಯನನ್ನು ತನ್ನ ಹಾಗೆಯೇ ಮಾಡುತ್ತಾನೆ.

**(4) ಮನೋ ದೀಕ್ಷೆ :–** ಇದನ್ನು ಆಮೆಯ ಆಲೋಚನೆ ಎನ್ನುತ್ತಾರೆ. ಆಮೆಯೂ ಒಂದು ಕಡೆ ಮೊಟ್ಟೆಯನ್ನು ಇಟ್ಟು ಆಹಾರಕ್ಕೆ ಹೋಗುತ್ತದೆ. ಮೋಡಗಳ ಗುಡುಗಿನ ಶಬ್ದವನ್ನು ಕೇಳಿದ ಕೂಡಲೇ, ಆಮೆಯು ತಾನು ಇಂತಹ ಕಡೆ ಮೊಟ್ಟೆಯನ್ನು ಇಟ್ಟಿದ್ದೇನೆ... ಈ ಗುಡುಗಿನ ಶಬ್ದಕ್ಕೆ ಆ ಮೊಟ್ಟೆಗಳು ಮರಿಗಳು ಆಗಬೇಕೆಂದು ಸಂಕಲ್ಪಿಸುತ್ತದೆ. ಆ ಸಂಕಲ್ಪ ಬಲದೊಂದಿಗೆ ಮೊಟ್ಟೆಗಳು ಮರಿಗಳಾಗುತ್ತವೆ.

ಹಾಗೆಯೇ ಶಿಷ್ಯನು ಎಲ್ಲಿದ್ದರೂ ಗುರು ಹೇಳಿದ ವಿದ್ಯೆಯನ್ನು ಶ್ರದ್ಧೆಯಾಗಿ ಆಚರಿಸುತ್ತಾ ಇರುತ್ತಾರೆ. ದೀಕ್ಷೆಯಿಂದ ಆಚರಿಸುತ್ತಾನೆ. ಆತ ಪರಬ್ರಹ್ಮ ಜ್ಞಾನ ಹೊಂದಲು ಅರ್ಹನಾಗುತ್ತಾನೆ. ಅಂತಹ ಶಿಷ್ಯನು ಬೇಗ ಪರಮಾರ್ಥವನ್ನು ಹೊಂದಬಲ್ಲ ಎಂದು ಗುರುವು ಸಂಕಲ್ಪಿಸುತ್ತಾನೆ. ಆ ದಿವ್ಯ ಸಂಕಲ್ಪ ಬಲದೊಂದಿಗೆ, ಶಿಷ್ಯನು ಅಭಿವೃದ್ಧಿ ಹೊಂದಿ ಪರಮಾರ್ಥವನ್ನು ಹೊಂದುತ್ತಾನೆ.

ಸೂರ್ಯಕಿರಣಗಳು ಸೋಕಿದ ಕೂಡಲೇ ಪದ್ಮವು ವಿಕಸಿಸಿದಂತೆ ಗುರುದೇವನ ಕರುಣ ಸೋಕಿದ ಕೂಡಲೇ ವೇದ ವೇದಗಳು, ಉಪನಿಷತ್ ಜ್ಞಾನ, ವಿಷಯಗಳು, ಸುಧೆಗಳು, ಶಿಷ್ಯನಿಗೆ ಲಭಿಸುತ್ತದೆ.

ಆದ್ದರಿಂದ ಶಿಷ್ಯನು ಸದ್ಗುರುವನ್ನು ಆಶ್ರಯಿಸಿ, ಆತನ ಕೃಪೆ ಹೊಂದಲು ಪ್ರಯತ್ನಿಸಬೇಕು. ಜೀವನವನ್ನು ಧನ್ಯವಾಗಿಸಿಕೊಳ್ಳಬೇಕು.

# ಗುರುವಿನ ಕುರಿತು

ಜ್ಞಾನ ಎಂದರೆ ಇಲ್ಲದ ವಸ್ತುಗಳನ್ನು ಕುರಿತಾಗಿ ತಿಳಿದುಕೊಳ್ಳುವುದಲ್ಲ, ಇರುವುದನ್ನು ತಿಳಿದುಕೊಳ್ಳುವುದು.

ಇರುವುದನ್ನು ಏಕೆ ತಿಳಿದುಕೊಳ್ಳಬೇಕು? ಎಂದರೆ ಅದು ಇದೆ ಎಂದು ನಿನಗೆ ತಿಳಿದಿಲ್ಲ, ಇರುವುದನ್ನು ಮರೆತಿರುವೆ...ಆದ್ದರಿಂದ ಮರೆತ ವಿಷಯವು ಅರಚಿದರು ಸಿಗುವುದಿಲ್ಲ, ಹುಡುಕಿದರೂ ಸಿಗುವುದಿಲ್ಲ. ಹೇಗೆ ತಿಳಿಯುತ್ತದೆ? ಇತರರು ನೆನಪು ಮಾಡಬೇಕು. ಯಾರು ನೆನಪಿಸುತ್ತಾರೆ? ಎಂದರೆ ಗುರುದೇವನೆ ನೆನಪಿಸುತ್ತಾನೆ.

ಆ ಗುರುದೇವನು ಎಂತಹವನಾಗಿರಬೇಕು? ಮೊದಲೇ ಶಾಸ್ತ್ರವನ್ನು ತಿಳಿದುಕೊಂಡಿರಬೇಕು. ಅಂದರೆ ಶ್ರೋತ್ರಿಯನಾಗಿರಬೇಕು... ಅಂದರೆ ಶ್ರುತರ ಜ್ಞಾನವನ್ನು ತಿಳಿದುಕೊಂಡು, ಜೀರ್ಣಿಸಿಕೊಂಡಿರಬೇಕು. ಅನುಭವವಿರಬೇಕು ಹೊಂದಿದ ಜ್ಞಾನವನ್ನು, ಅನುಭವವನ್ನು ಶಿಷ್ಯರ ಹಂತಕ್ಕೆ ಇಳಿದು ಬಂದು ಅವರಿಗೆ ಅರ್ಥವಾಗುವಂತೆ ಹೇಳಬಲ್ಲವರಾಗಿರಬೇಕು. ಅದಕ್ಕಾಗಿ ಆತ ಕರುಣಾ ಸಮುದ್ರನಾಗಿಯೂ ಇರಬೇಕು.

ಶಿಷ್ಯರು ಅಂತಹ ಶೋತ್ರೀಯ ಬ್ರಹ್ಮನಿಷ್ಠರಾದ ಗುರುಗಳನ್ನು ಆಶ್ರಯಿಸಬೇಕು. ಅವರನ್ನೇ ಸೇವಿಸಬೇಕು. ಜ್ಞಾನವನ್ನು ಹೊಂದಿ ಕೃತಾರ್ಥರಾಗಬೇಕು.

ಗುರುವಿನ ಬೋಧನೆಯೊಂದಿಗೆ ತಾನು ಅನ್ವೇಷಿಸುವ ಸತ್ಯ ವಸ್ತು ತನ್ನಿಂದ ಬೇರೆಯಾಗಿಲ್ಲವೆಂದು, ತಾನೇ ಆ ಸತ್ಯ ವಸ್ತುವಾದ 'ಆತ್ಮ' ಎಂದು ತಿಳಿದುಕೊಳ್ಳುತ್ತಾನೆ. ಆ ಆತ್ಮಾನುಭೂತಿಯಲ್ಲಿ ಶಿಷ್ಯನನ್ನು ಇರಿಸುವ ಗುರುವು ಸಾಕ್ಷಾತ್ ಭಗವಂತನೇ ಆಗುತ್ತಾನೆ. ಅಂತಹ ಗುರುವಿನ ಋಣವು ತೀರುವುದಲ್ಲ, ತೀರಿಸುವುದೂ ಅಲ್ಲ.

ಶಿಷ್ಯನು ತನ್ನಲ್ಲಿನ ಅಜ್ಞಾನವು ಗುರುದೇವ ಪ್ರಸಾದಿಸುವ ಜ್ಞಾನಾಗ್ನಿಯಲ್ಲಿ ಸಮಿತ್ತಿನಂತೆ ದಗ್ಧವಾಗಬೇಕೆನ್ನುವುದು ಶಿಷ್ಯನ ಭಾವನೆ. ಇಂದು ಗುರು ಶಿಷ್ಯರ ಸಂಪ್ರದಾಯ ಮರೆಯಾಗಿದೆ. ಇಂದಿನ ಶಿಷ್ಯರು ಸಮಿತ್ತುಗಳು ಅಂದರೆ ವೈರಾಗ್ಯಕ್ಕೆ ಬದಲಾಗಿ ಚಾಡಿಗಳನ್ನು ಹಿಂದಿಟ್ಟುಕೊಂಡು ಬರುತ್ತಿದ್ದಾರೆ. ಗುರು ದೇವರಲ್ಲಿ ಜ್ಞಾನಾಗ್ನಿ ದರ್ಶಿಸುವುದರ ಮಾತಿರಲಿ, ಆತನಲ್ಲಿ ಶೋಕಾಗ್ನಿಯನ್ನು ತುಂಬಿಸುತ್ತಿದ್ದಾರೆ. ಗುರು

ಹೇಗಿರಬೇಕು? ಎನ್ನುವುದನ್ನು ಶಾಸಿಸುತ್ತಿದ್ದಾರೆ. ಕೆಲಸಕ್ಕೆ ಬಾರದ ವಿಷಯಗಳ ಕುರಿತು ಚರ್ಚಿಸಿಕೊಳ್ಳುತ್ತಿದ್ದಾರೆ.

ಗುರುವನ್ನು ಸಮೀಪಿಸುವ ಶಿಷ್ಯನು ವೈರಾಗ್ಯವನ್ನು, ಗುರುಭಕ್ತಿಯನ್ನು ತನ್ನ ಹಿಂದೆ ಇಟ್ಟುಕೊಂಡು ಬರಬೇಕು. ಗುರು ವಚನದಲ್ಲಿ ಸಂಪೂರ್ಣ ವಿಶ್ವಾಸ ಇರಬೇಕು. ಕೇಳಿರುವುದನ್ನು ಆಚರಿಸಬೇಕು. ಆತ್ಮದೊಂದಿಗೆ ಅನುಸಂಧಾನವಾಗಬೇಕು. ಆಗ ತನ್ನನ್ನು ಸಮೀಪಿಸಿದ ಶಿಷ್ಯನಿಗೆ ಗುರು ಏನು ಬೋಧಿಸುತ್ತಾರೆ? ಎಂದು ತಿಳಿಯಬೇಕೆಂದರೆ, ಗುರು ಮಹಾರಾಜ್ ರವರು ಏನು ಬೋಧಿಸಿದರು ಎನ್ನುವುದನ್ನು ತಿಳಿದುಕೊಳ್ಳೋಣ.

ನಾನು ಪ್ರಸಾದಿಸುವ ಆತ್ಮ ಜ್ಞಾನ ಸ್ವೀಕರಿಸಿ, ಜ್ಞಾನದ ಮೇಲೆ ನಂಬಿಕೆ, ವಿಶ್ವಾಸ ಇರಿಸಿ. ಪ್ರತಿನಿತ್ಯ ಒಂದು ಗಂಟೆ ಸಾಧನೆ ಮಾಡುತ್ತಾ, ನಿಮ್ಮ ಜೀವನವನ್ನು ಮುಂದುವರಿಸಿದರೆ ನೀವು ಮಲಭಾಂಡ ವಾಗಿ ಭಾವಿಸುತ್ತಿರುವ ಶರೀರವನ್ನು ಪವಿತ್ರ ದೇವಾಲಯವಾಗಿ ಮಾಡುತ್ತದೆ ಎಂದು ಹೇಳುತ್ತಾರೆ.

ಜಿಜ್ಞಾಸುಗಳು ಇರುವುದನ್ನು ನಿಂದಿಸಿಕೊಳ್ಳುತ್ತಾ ಬಾಧೆ ಪಡುವುದಲ್ಲ... ಏನು ಮಾಡಬೇಕೆಂದರೆ ಪ್ರತಿದಿನ ಒಂದೊಂದು ಲೋಪವನ್ನು ಸಾಧನೆಯಲ್ಲಿ ತೊಲಗಿಸಿಕೊಳ್ಳಬೇಕು. ಮನಸ್ಸಿಗೆ ಬೋಧಿಸಿಕೊಳ್ಳುತ್ತಾ ಇರಬೇಕು. ಅಷ್ಟೇ ಅಲ್ಲ ವಾಸನಾ ಕ್ಷಯಕ್ಕೆ ಅನುಕೂಲವಾಗಿ ಜೀವಿಸುತ್ತಾ ಮುಂದಕ್ಕೆ ನಡೆಯಬೇಕು ಎಂದಿದ್ದಾರೆ.

ಶರೀರವು ಇರುವಾಗಲೇ ಇರುವ ಸಮಯವನ್ನು ಸದ್ವಿನಿಯೋಗ ಮಾಡಿಕೊಂಡು ಜೀವಿಸಿದಾಗ ಮಾನವರು ವ್ಯಕ್ತಿಗಳಾಗಿ ಅಲ್ಲದೆ, ಸರ್ವಶಕ್ತಿ ಸಂಪನ್ನರಾಗಿ ಬದಲಾಗುತ್ತಾರೆ.

ಆತ್ಮಾರಾಧನೆಯಲ್ಲಿ ಆತ್ಮಶಕ್ತಿಯಾಗಿ ಬದಲಾದರೆ, ವ್ಯಕ್ತಿಯಾಗಿ ಇದ್ದರೂ, ಅನಂತಶಕ್ತಿಯಾಗಿ ಬದಲಾಗುತ್ತಾರೆ.

ತನ್ನ ಮೇಲೆ ತಾನು ಆಧಾರವಾಗಿ ಇರುವುದನ್ನೇ ಆತ್ಮ ಎನ್ನುತ್ತಾರೆ. ತನ್ನ ಪ್ರಕಾಶವನ್ನು ಪ್ರಕಾಶಿಸುವಂತೆ ಮಾಡುವುದಕ್ಕೆ ಇನ್ನೊಂದು ಪ್ರಕಾಶದ ಅಗತ್ಯವಿಲ್ಲ... ಅದೇ ಆತ್ಮ ತತ್ವ.

ಆ ಆತ್ಮವೇ ವಸ್ತು ಪ್ರಪಂಚವನ್ನು ತಿಳಿದುಕೊಳ್ಳಲು ಜ್ಞಾನಶಕ್ತಿಯನ್ನು ನೀಡುತ್ತದೆ. ಅದು

ಯಾವಾಗಲೂ ಮಾನವನಲ್ಲಿ ಪ್ರಾಪ್ತವಾಗಿರುತ್ತದೆ. ಹಾಗೆ ಪ್ರಾಪ್ತವಾಗಿರುವುದನ್ನು ತಿಳಿದುಕೊಳ್ಳುವ ಬದಲು ಮಾನವನು ದೇಹವೆನ್ನುವ ಸಂಸಾರದಲ್ಲಿ ಸುತ್ತಲೂ ಇರುವ ವಸ್ತುಗಳೆಲ್ಲವನ್ನು ತನ್ನ ಮನಸ್ಸಿನ ಒಳಗೆ ಮುದ್ರೆಹಾಕಿ ಅದನ್ನು ಏರ್ಪಾಟು ಮಾಡಿಕೊಳ್ಳಲು ಅಂಧಕಾರವನ್ನು ಸೃಷ್ಟಿಸಿಕೊಳ್ಳುತ್ತಿದ್ದಾನೆ.

ಮಾನವನು ಆ ವಿಷಯ ವಾಸನೆಯ ಸಮೂಹವೆಲ್ಲವನ್ನು ತೊಲಗಿಸಿಕೊಳ್ಳುತ್ತಾ, ಹೋಗಬೇಕು. ಶರೀರ ಕೂಡ ಒಂದು ವಸ್ತುವೇ ಎನ್ನುವುದು ನೆನಪಿರಬೇಕು. ಮಾನವನು ಗುರುವಿನ ತಂತ್ರದ ಮೂಲಕ ಒಂದೊಂದನ್ನು ತೊಲಗಿಸಿಕೊಳ್ಳುತ್ತಾ, ಶುದ್ಧ ಚೈತನ್ಯ ಸ್ಥಿತಿಗೆ ಸೇರಬೇಕಾಗಿರುತ್ತದೆ ಎಂದು ಗುರು ಮಹಾರಾಜ್ ರವರು ಬೋಧಿಸಿದ್ದಾರೆ.

## ಆಶ್ರಮಗಳು

ಪ್ರಪಂಚದಲ್ಲಿನ ಮಾನವರು ವಿಧವಿಧವಾದ ಜೀವನ ವಿಧಾನವನ್ನುಅನುಸರಿಸುತ್ತಾ ಇರುತ್ತಾರೆ, ಆಯ್ಕೆ ಮಾಡುತ್ತಾರೆ , ಅವುಗಳನ್ನೇ ಆಶ್ರಮಗಳು ಎನ್ನುತ್ತಾರೆ. ಹಿಂದೆ ಹಿರಿಯರು ಅವುಗಳನ್ನು ನಾಲ್ಕು ವಿಧಗಳಾಗಿ ವಿಭಜಿಸಿದ್ದರು.

**(1) ಬ್ರಹ್ಮಚರ್ಯಾಶ್ರಮ:–** ವೇದ ಅಧ್ಯಯನಕ್ಕೆ ಸ್ವೀಕರಿಸಿದ ಬ್ರಹ್ಮಚರ್ಯಾಶ್ರಮ

**(2) ಗೃಹಸ್ಥಾಶ್ರಮ :–** ಹತ್ತು ಜನರಿಗೆ ಹಂಚಿ ತಾನು ಅನುಭವಿಸುವ ಆಶ್ರಮವೇ ಗೃಹಸ್ಥಾಶ್ರಮ.

**(3) ವಾನಪ್ರಸ್ಥಾಶ್ರಮ:–** ಗೃಹಸ್ಥಾಶ್ರಮ ಸಾಕಾದ ನಂತರ ಸ್ವೀಕರಿಸುವ ಆಶ್ರಮವೇ ವಾನಪ್ರಸ್ಥಾಶ್ರಮ.

**(4) ಸನ್ಯಾಸಾಶ್ರಮ:–** ವೈರಾಗ್ಯದಿಂದ ಸ್ವೀಕರಿಸುವ ಆಶ್ರಮವೇ ಸನ್ಯಾಸಾಶ್ರಮ.

# ವಿವಿಧ ಗುರುಗಳು!

ಪ್ರಪಂಚದಿಂದ ತಯಾರಾದ ಮನಸ್ಸು ಪ್ರಪಂಚದಲ್ಲಿರುವುದನ್ನೇ ಬಯಸುತ್ತದೆ. ಭಗವಂತನ ಕುರಿತು ತಿಳಿದುಕೊಳ್ಳಬೇಕೆಂಬ ಪ್ರಯತ್ನವನ್ನು ಮಾಡುವುದಿಲ್ಲ.. ಭಗವಂತನನ್ನು ಸಹ ಪ್ರಪಂಚದಲ್ಲಿ ಇರುವ ವಸ್ತುಗಳು ಬೇಕೆಂದು ಈ ಮನಸ್ಸು ಆರಾಧಿಸುತ್ತದೆ.

ಆದರೆ ಮನಸ್ಸಿನ ಪ್ರಭಾವ ಕಡಿಮೆಯಾಗುತ್ತಾ ಹೋದಂತೆ, ಪ್ರಪಂಚಕ್ಕಿಂತ ಭಗವಂತನ ಕುರಿತು, ಭಗವಂತನ ಸೃಷ್ಟಿಯಲ್ಲಿನ ಲೋಕಗಳ ಕುರಿತು ತಿಳಿದುಕೊಳ್ಳಬೇಕೆನ್ನುವ ಬಯಕೆಯೂ ಹೆಚ್ಚುತ್ತಿರುತ್ತದೆ. ಅದು ಚೆನ್ನಾಗಿ ಧ್ಯಾನ ಮಾಡಿದವರಿಗೆ ಮತ್ತು ಗತಜನ್ಮದಲ್ಲಿ ಈ ಸ್ಥಾಯಿಗೆ ಏರಿದವರಿಗೆ ಮಾತ್ರವೇ ಆಸಕ್ತಿಯು ಇರುತ್ತದೆ.

ಗಮನಿಸಿದರೆ, ಪ್ರತಿಯೊಬ್ಬರೂ ಗುರುವನ್ನು ಆಶ್ರಯಿಸುತ್ತಾರೆ. ಆದರೆ ಅವರಿಗೆ ಇಷ್ಟವಾದ ಗುರುವನ್ನು ಅವರು ಆಶ್ರಯಿಸುತ್ತಾ ಇರುತ್ತಾರೆ. ಕಾರಣ ಅವರು ಯಾವ ಸ್ಥಿತಿಯಲ್ಲಿ ಇದ್ದರೆ ಅಂತಹ ಗುರುವೇ ಅವರಿಗೆ ಇಷ್ಟವಾಗುತ್ತಾರೆ.

ಲೋಕದಲ್ಲಿ ಎಷ್ಟೋ ಜನ ಗುರುಗಳು ಅನೇಕ ವಿಧವಾದ ಗುರುಗಳು ಇರುತ್ತಾರೆ. ಹಾಗಾಗಿ ಗುರುಗಳನ್ನು ನಾವು ಎರಡು ವಿಧಗಳಾಗಿ ವಿಭಜಿಸಬಹುದು. ಇವರನ್ನು .. ಪ್ರಾಪಂಚಿಕ ಗುರುಗಳು, ಆಧ್ಯಾತ್ಮಿಕ ಗುರುಗಳು ಎಂದು ಹೇಳಬಹುದು.

ಪ್ರಾಪಂಚಿಕ ಗುರುಗಳು ಪ್ರಾಪಂಚಿಕವಾದ ವಿಷಯಗಳು, ಲಾಭಗಳ ಕುರಿತು ಬೋಧಿಸುತ್ತಾರೆ. ಆಧ್ಯಾತ್ಮಿಕ ಗುರುಗಳು ಆಧ್ಯಾತ್ಮಿಕ ವಿಷಯಗಳು, ಅಧ್ಯಾತ್ಮಿಕ ಲಾಭಗಳ ಕುರಿತು ಬೋಧಿಸುತ್ತಾರೆ.

ಆದರೆ ಪ್ರಾಪಂಚಿಕ ಲಾಭಗಳು ತಾತ್ಕಾಲಿಕ..ಕಾಣುವಂತಹದು. ಆದರೆ ಆಧ್ಯಾತ್ಮಿಕ ಲಾಭಗಳು ಶಾಶ್ವತವಾದದ್ದು ಕಾಣಿಸದೆ ಇರುವುದು ಕಾಣಿಸುವ ಪ್ರಪಂಚವನ್ನು ’ಇಹಲೋಕ ’ಎನ್ನುತ್ತಾರೆ, ಕಾಣದಿರುವ ಲೋಕಗಳನ್ನು ’ಪರಲೋಕ’ ಎನ್ನುತ್ತಾರೆ.

ಮೊದಲನೆಯ ವಿಧದ ಗುರುಗಳು ಮಾನವರ ಬಯಕೆಗಳು ನೆರವೇರಲು, ದೈವವನ್ನು ಆಶ್ರಯಿಸಬೇಕೆಂದು ಹೇಳುತ್ತಾರೆ. ದೇವರ ಒಂದು ಹಿರಿಮೆಯನ್ನು ಅನೇಕ ವಿಧಗಳಾಗಿ ವರ್ಣಿಸುತ್ತಾರೆ.

ಆದರೆ ಎರಡನೇ ವಿಧವಾದ ಗುರುಗಳು ದೇವರು ಯಾರು ತಿಳಿಸಿ, ಆ ದೇವರನ್ನು ಧ್ಯಾನದ ಮೂಲಕ ಆಶ್ರಯಿಸಬೇಕೆಂದು ಹೇಳುತ್ತಾರೆ. ಶಾಶ್ವತ ಮುಕ್ತಿಯನ್ನು ಹೊಂದಬೇಕೆಂದು ಹೇಳುತ್ತಾರೆ.

ಹಾಗೆ ಲೋಕದಲ್ಲಿ ಎರಡು ವಿಧಗಳ ಈ ಗುರುಗಳು ನಮಗೆ ಕಾಣಿಸುತ್ತಾರೆ. ಎರಡು ವಿಧಗಳ ಬೋಧನೆಗಳು ನಮಗೆ ಕಾಣಿಸುತ್ತವೆ. ಆದರೆ ಲೋಕದಲ್ಲಿ ಇದು ಸಹಜ. ಎಷ್ಟು ಯುಗಗಳು ಬದಲಾದರೂ ಈ ಎರಡು ವಿಧದವರು ಇದ್ದೆ ಇರುತ್ತಾರೆ.

ಆದ್ದರಿಂದ ನಮ್ಮನ ನಾವು ಯಾವ ಸ್ಥಾಯಿಯಲ್ಲಿ ಇರುವೆವು ತಿಳಿದುಕೊಳ್ಳಬೇಕೆಂದರೆ? , ಈ ಎರಡು ವಿಧದ ಬೋಧೇಗಳಲ್ಲಿ ನಮಗೆ ಯಾವುದು ಇಷ್ಟವಾಗುತ್ತದೆ, ಯಾವುದು ಅರ್ಥವಾಗುತ್ತಿದೆ ಯಾವುದರ ಮೇಲೆ ನಮಗೆ ಆಸಕ್ತಿ ಇದೆ ಯಾರ ಬೋಧನೆಗಳು ನಮ್ಮನ್ನು ಪ್ರಭಾವಿತಗೊಳಿಸುತ್ತವೆ ಎನ್ನುವುದರ ಮೇಲೆ ಆಧಾರವಾಗಿರುತ್ತದೆ. ಆದ್ದರಿಂದ ಇವರ ಕುರಿತು ಮತ್ತಷ್ಟು ವಿವರವಾಗಿ ಮತ್ತಷ್ಟು ವಿಷಯಗಳನ್ನು ತಿಳಿದುಕೊಳ್ಳೋಣ.

(1) ಮೊದಲನೆಯ ವಿಧದ ಗುರುಗಳು ಭುಕ್ತಿಗಾಗಿ ನೋಡುವವರ, ಕೋರಿಕೆಗಳನ್ನು ತೀರಿಸಿಕೊಳ್ಳಲಿಕ್ಕಾಗಿ ಅಂದರೆ ಭೋಗಾಸಕ್ತಿ ಇರುವವರಿಗೆ ಬೋಧಿಸುವ ಗುರುಗಳು.

ಎರಡನೇ ವಿಧದ ಗುರುಗಳು, ಮುಕ್ತಿಗಾಗಿ ಅಂದರೆ ದುಃಖದಿಂದ ಹೊರಬರಬೇಕೆನ್ನುತ್ತಾ, ಯೋಗವನ್ನು ಅನುಸರಿಸಬೇಕು ಎಂದುಕೊಳ್ಳುವವರಿಗಾಗಿ ಬೋಧಿಸುವ ಗುರುಗಳು.

(2) ಮೊದಲನೇ ವಿಧದ ಗುರುಗಳು ಕೋರಿಕೆಗಳನ್ನು ತೀರಿಸುವ ಮಾರ್ಗಗಳನ್ನು ಬೋಧಿಸುತ್ತಾರೆ.

ಎರಡನೇ ವಿಧದ ಗುರುಗಳು ದುಃಖವನ್ನು ತೊಲಗಿಸಿಕೊಳ್ಳುವ ಮಾರ್ಗವನ್ನು ಬೋಧಿಸುತ್ತಾರೆ.

(3) ಮೊದಲನೇ ವಿಧದ ಗುರುಗಳು ಬೋಧಿಸುವ ಭಕ್ತಿಯು ಭುಕ್ತಿಗಾಗಿ ಎನ್ನುವಂತೆ ಇರುತ್ತದೆ ಅಂದರೆ ಧನ ಸಂಪಾದನೆ ಸಂಪತ್ತುಗಳು ಭೋಗ ಭಾಗ್ಯಗಳಂತಹುದು. ಅವುಗಳಿಗಾಗಿ ಆರಾಧಿಸಲು ಸಲಹೆ ನೀಡುತ್ತಾರೆ.

ಆದರೆ ಎರಡನೆಯ ವಿಧದ ಗುರುಗಳು ಬೋಧಿಸುವ ಭಕ್ತಿ ಮುಕ್ತಿಗಾಗಿ ಎನ್ನುವಂತೆ ಇರುತ್ತದೆ. ಅಂದರೆ, ದುಃಖದಿಂದ,ಸಮಸ್ಯೆಗಳಿಂದ, ಕಷ್ಟಗಳಿಂದ, ಹೊರಬರಲು ಹೇಳುತ್ತಾರೆ. ಅದಕ್ಕೋಸ್ಕರ ಧ್ಯಾನ ಮಾಡಲು ಹೇಳುತ್ತಾರೆ.

(4) ಮೊದಲನೇ ವಿಧದ ಗುರುಗಳು ದೇವರನ್ನು ಕೋರಲು ಹೇಳಿದರೆ,

ಎರಡನೇ ವಿಧದ ಗುರುಗಳು ದೇವರನ್ನು ಸೇರಿಕೊಳ್ಳಲು ಬೋಧಿಸುತ್ತಾರೆ. ಅಂದರೆ ಪೂರ್ಣಾತ್ಮವನ್ನು ಸೇರಿಕೊಳ್ಳಬೇಕೆಂದು ಬೋಧಿಸುತ್ತಾರೆ. ಅದೇ ನಿನ್ನ ಗಮ್ಯ ಎನ್ನುತ್ತಾರೆ ಆಗಲೇ ದುಃಖದಿಂದ ಶಾಶ್ವತವಾಗಿ ಹೊರ ಬರುತ್ತೇವೆ ಎಂದು ಹೇಳುತ್ತಾರೆ.

(5) ಮೊದಲನೇ ವಿಧದ ಗುರುಗಳು ದೇವರ ಮಹಾತ್ಮೆಗಳು, ಹಿರಿಮೆಗಳು, ದೇವರ ಲೀಲೆಗಳನ್ನು ಬೋಧಿಸುತ್ತಾರೆ. ದೇವರನ್ನು ಕೋರಲು ಸಲಹೆ ನೀಡುತ್ತಾರೆ.

ಆದರೆ ಎರಡನೇ ವಿಧದ ಗುರುಗಳು ದೇವರ ಕುರಿತು ದೇವರ ಬೋಧನೆಗಳ ಕುರಿತು ಅವುಗಳ ಸಾರಾಂಶದ ಕುರಿತು ಬೋಧಿಸುತ್ತಾ ಅದನ್ನು ಆಚರಿಸಲು ಹೇಳುತ್ತಾರೆ.

(6) ದೇವರು ಉದ್ದರಿಸುತ್ತಾನೆ, ಪಾಪಗಳನ್ನು ಕ್ಷಮಿಸುತ್ತಾನೆ ಎಂದು ಮೊದಲನೆಯ ವಿಧದ ಗುರುಗಳು ಬೋಧಿಸುತ್ತಾರೆ.

ಆದರೆ ಎರಡನೆಯ ವಿಧದ ಗುರುಗಳು ದೇವನು ಉದ್ಧರಿಸುವುದಿಲ್ಲ, ಪಾಪಗಳನ್ನು ಕ್ಷಮಿಸುವುದಿಲ್ಲ ನಿನ್ನನ್ನು ನೀನೇ ಉದ್ದರಿಸಿಕೊಳ್ಳಬೇಕು, ಪಾಪಗಳನ್ನು ಮಾಡದಿರು ಸಾಧನೆ ಮಾಡು! ಎಲ್ಲವನ್ನು ನೀನೆ ಪಡೆದುಕೋ ಎಂದು ಭೋದಿಸುತ್ತಾರೆ.

(7) ಮೊದಲನೇ ವಿಧದ ಗುರುಗಳು ರೂಪವೇ ದೇವರು, ಪೂಜಿಸಿ ಎಂದು ಹೇಳುತ್ತಾರೆ. ಆದರೆ ಎರಡನೇ ವಿಧದ ಗುರುಗಳು ಆತ್ಮವೇ ದೇವರು ಧ್ಯಾನ ಮಾಡಿ ಎಂದು ಹೇಳುತ್ತಾರೆ.

(8) ಮೊದಲೇ ವಿಧದ ಗುರುಗಳನ್ನು ಅನುಸರಿಸುವವರು ಬಕಪಕ್ಷಿಯಂತೆ, ಅಂದರೆ ಕೋರಿಕೆಗಳಿಗಾಗಿ ಕಷ್ಟಗಳಿಗಾಗಿ ಹಣಕ್ಕಾಗಿ ಆರಾಧನೆಗಳನ್ನು ಮಾಡುತ್ತಾರೆ.

ಆದರೆ ಎರಡನೇ ವಿಧದ ಗುರುಗಳನ್ನು ಅನುಸರಿಸುವವರು ಹಂಸ ಭಕ್ತರಾಗಿ ತಯಾರಾಗುತ್ತಾರೆ. ಜ್ಞಾನಕ್ಕಾಗಿ ಧ್ಯಾನ ಮಾಡುತ್ತಾರೆ ಭಗವಂತನಿಗೆ ಇಷ್ಟವಾಗುತ್ತಾರೆ, ಹತ್ತಿರವಾಗುತ್ತಾರೆ.

ಈ ವಿಷಯ ಭಗವದ್ಗೀತೆಯಲ್ಲಿ ಹೇಳಲಾಗಿದೆ.

**ಶ್ಲೋ ॥ ಚತುರ್ವಿಧ ಭಜಂತೆ ಮಾಂ ಜನಾಸ್ಸು ಕೃತಿನೋರ್ಜುನ**

**ಆರ್ಥೋ ಜಿಜ್ಞಾಸುರರ್ಥಾರ್ಥಿ ಜ್ಞಾನಿ ಚ ಭರತರ್ಷಭ (ಭ ಗೀ 7–16)**

ತಾ : ಭರತ ವಂಶ ಶ್ರೇಷ್ಠ ನಾದ ಓ ಅರ್ಜುನ ಆಪತ್ತಿನಲ್ಲಿ ಆರ್ತನಾದಗಳನ್ನು ಮಾಡುವವರು, ಧನವನ್ನು ಆಶಿಸುವವರು, ಭಗವಂತನ ತಿಳಿದುಕೊಳ್ಳಬೇಕೆಂದು

ಆಸಕ್ತಿಯುಳ್ಳವರು, ಆತ್ಮಜ್ಞಾನವುಳ್ಳವರು ಎನ್ನುವ, ನಾಲ್ಕು ವಿಧಗಳವರು ನನ್ನನ್ನು ಸೇವಿಸುತ್ತಿದ್ದಾರೆ.

**ಶ್ಲೋ॥ ತೇಷಾಮ್ ಜ್ಞಾನಿ ನಿತ್ಯ ಯುಕ್ತ ಏಕಭಕ್ತಿರ್ವಿಶಿಷ್ಯತೆ**

**ಪ್ರಿಯೋ ಹಿ ಜ್ಞಾನಿನಿನ್ ತ್ಯರ್ಥ ಮಹಾಂ ಸ ಚ ಮಮ ಪ್ರಿಯ: (ಭ.ಗೀ. 7–17)**

ತಾ : ಅವರಲ್ಲಿ ನಿತ್ಯವೂ ಪರಮಾತ್ಮ (ಆತ್ಮ) ದೊಂದಿಗೆ ಕೂಡಿರುವವನು ಪರಮಾತ್ಮ (ಆತ್ಮ) ನಲ್ಲಿ ಭಕ್ತಿ (ಆಸಕ್ತಿ) ಉಳ್ಳವನು 'ಜ್ಞಾನಿ' ಶ್ರೇಷ್ಠನು. ಅಂತಹ ಜ್ಞಾನಿಗೆ ನಾನು ಪ್ರಿಯವಾದವನು ಎಂದೇ, ಆತನು ಕೂಡಾ ನನಗೆ ಅತಿ ಹೆಚ್ಚು ಪ್ರಿಯನಾದವನು.

(9) ಮೊದಲನೆಯ ವಿಧದ ಗುರುಗಳು ದೇವರು ಬೇರೆ ಎಲ್ಲೋ ಇರುತ್ತಾನೆ ಎಂದು ಹೇಳುತ್ತಾರೆ. ಆತನನ್ನು ಆಶ್ರಯಿಸಲು ವಿಧವಿಧವಾದ ಮಾರ್ಗಗಳನ್ನು ಹೇಳುತ್ತಾ ಇರುತ್ತಾರೆ.

ಎರಡನೇ ವಿಧದ ಗುರುಗಳು "ನೀನೇ ದೇವರು" ಎಂದು ಹೇಳುತ್ತಾರೆ "ಅಹಂ ಬ್ರಹ್ಮಾಸ್ಮಿ" ಎನ್ನುವ ವೇದ ವಾಕ್ಯಗಳ ಸತ್ಯವನ್ನು ಹೇಳುತ್ತಾರೆ. ಮೊದಲು ನಿನ್ನನ್ನು ನೀನು ತಿಳಿದುಕೋ ಎಂದು ಹೇಳುವುದೇ ಅಲ್ಲದೆ ಅದಕ್ಕೆ ಬೇಕಾದ "ಶ್ವಾಸದ ಮೇಲೆ ಗಮನ" ಧ್ಯಾನಮಾರ್ಗವನ್ನು ಬೋಧಿಸುತ್ತಾರೆ.

(10) ಮೊದಲನೇ ಗುರುಗಳು ಕೃತಾರ್ಥರಾಗಬೇಕೆಂದರೆ ದೇವರ ಆಶ್ರಯ ಬೇಕು. ದೇವರ ಅನುಗ್ರಹವನ್ನು ಹೊಂದಬೇಕು ಎಂದು ಹೇಳುತ್ತಾರೆ. ಆದರೆ ಎರಡನೇ ವಿಧದ ಗುರುಗಳು ಕೃತಾರ್ಥರಾಗಬೇಕೆಂದರೆ ನೀನೇ ದೇವರೆಂದು ತಿಳಿದುಕೊಳ್ಳಬೇಕು ಅಂದರೆ ಅಹಂ ಬ್ರಹ್ಮಾಸ್ಮಿ ಎನ್ನುವ ಸತ್ಯವನ್ನು ತಿಳಿದುಕೊಳ್ಳಬೇಕು ಎಂದು ಹೇಳುತ್ತಾರೆ ಈ ಮಾರ್ಗವೇ ಶ್ವಾಸದ ಮೇಲೆ ಗಮನ ಧ್ಯಾನ ಎಂದು ಹೇಳುತ್ತಾರೆ.

(11) ಮೊದಲನೇ ವಿಧದ ಗುರುಗಳು ಬೋಧನೆಗಳನ್ನು ಮಾಡುತ್ತಾರೆ. ಎರಡನೇ ವಿಧದ ಗುರುಗಳು ಧ್ಯಾನ ಸಾಧನೆಯನ್ನು ಮಾಡಲು ಹೇಳುತ್ತಾರೆ.

(12) ಮೊದಲನೇ ವಿಧದ ಗುರುಗಳನ್ನು ಅನುಸರಿಸುವವರಿಗೆ ಅಜ್ಞಾನ ಹೋಗುವುದಿಲ್ಲ,ಅವರಿಗೆ ತುಂಬಾ ವಿಷಯಗಳು ಅರ್ಥವಾಗುವುದಿಲ್ಲ. ಆದರೆ ಎರಡನೇ ವಿಧದ ಗುರುಗಳನ್ನು ಅನುಸರಿಸುವವರಿಗೆ ಅಜ್ಞಾನ ಹೋಗುತ್ತದೆ, ಜ್ಞಾನವಂತರಾಗುತ್ತಾರೆ. ತಿಳಿಯದ ಎಷ್ಟೋ ವಿಷಯಗಳನ್ನು ತಿಳಿದುಕೊಳ್ಳುತ್ತಾರೆ.

(13) ಮೊದಲನೆಯ ವಿಧದ ಗುರುಗಳು ಆಶಾಶ್ವತವಾದದ್ದನ್ನು ಬೋಧಿಸುತ್ತಾರೆ. ಎರಡನೇ ವಿಧದ ಗುರುಗಳು ಶಾಶ್ವತವಾದದನ್ನು ಕುರಿತು ಬೋಧಿಸುತ್ತಾರೆ.

(14) ಮೊದಲನೇ ವಿಧದ ಗುರುಗಳು ಕಾಣಿಸುವುದರ ಕುರಿತು ಬೋಧಿಸುತ್ತಾರೆ. ಎರಡನೇ ವಿಧದ ಗುರುಗಳು ಕಾಣದಿರುವ, ಅವ್ಯಕ್ತವಾಗಿರುವುದರ ಕುರಿತು ಬೋಧಿಸುತ್ತಾರೆ.

(15) ಮೊದಲನೇ ವಿಧದ ಗುರುಗಳು ದೇಹವೇ ನೀನು ಎಂದು ಹೇಳುತ್ತಾರೆ ದೇಹಕ್ಕೆ ಪ್ರಾಮುಖ್ಯತೆ ನೀಡುವ, ದೇಹಕ್ಕೆ ಸಂಬಂಧಿಸಿದ ವಿಷಯಗಳನ್ನು ಹೇಳುತ್ತಾರೆ.

ಎರಡನೇ ವಿಧದ ಗುರುಗಳು ನೀನು ದೇಹವಲ್ಲ ಆತ್ಮ ಎಂದು ಹೇಳುವುದಲ್ಲದೆ ಆತ್ಮಕ್ಕೆ ಪ್ರಾಮುಖ್ಯತೆಯನ್ನು ಕೊಡಲು ಹೇಳುತ್ತಾರೆ. ಆತ್ಮಕ್ಕೆ ಸಂಬಂಧಿಸಿದ ವಿಷಯಗಳನ್ನೇ ಹೇಳುತ್ತಾರೆ.

(16) ಮೊದಲನೇ ವಿಧದ ಗುರುಗಳು ಎಲ್ಲಾ ಬೇರೆ ಬೇರೆ ಎನ್ನುವಂತೆ ಹೇಳುತ್ತಾರೆ ಆದರೆ ಎರಡನೇ ವಿಧದ ಗುರುಗಳು ಎಲ್ಲಾ ಒಂದೇ ಎಲ್ಲಾ ಜೀವಿಗಳಲ್ಲೂ ಆತ್ಮ ಪದಾರ್ಥವಿದೆ ಎಂದು ಹೇಳುತ್ತಾರೆ.

(17) ಮೊದಲನೇ ವಿಧದ ಗುರುಗಳು ದೇವರು ಬೇರೆ ಎಲ್ಲೋ ಇದ್ದಾನೆ ಎಂದು ಹೇಳುತ್ತಾರೆ. ಆದರೆ ಎರಡನೇ ವಿಧದ ಗುರುಗಳು ಎಲ್ಲವೂ ದೈವ ಸ್ವರೂಪವೇ ಎಲ್ಲದರಲ್ಲೂ ಇರುವುದು ದೇವರೇ ಎಂದು ಸರ್ವಂ ಖಲ್ವಿದಂ ಬ್ರಹ್ಮ ಎನ್ನುವ ವೇದವಾಕ್ಯವನ್ನು ಹೇಳುತ್ತಾರೆ.

(18) ಮೊದಲನೇ ವಿಧದ ಗುರುಗಳು ಪ್ರಾಪಂಚಿಕವಾದ ಅಂದರೆ ದೇಹ ಸೇವೆಗಳನ್ನು ಮಾಡಲು ಹೇಳುತ್ತಾರೆ. ಪುಣ್ಯಕಾರ್ಯಗಳನ್ನು ಮಾಡಲು ಹೇಳುತ್ತಾರೆ. ಆದರೆ ಎರಡನೇ ವಿಧದ ಗುರುಗಳು ಆಧ್ಯಾತ್ಮಿಕ ಸೇವೆಗಳು ಅಂದರೆ ಆತ್ಮ ಸೇವೆಗಳು ಮಾಡಲು ಹೇಳುತ್ತಾರೆ.

(19) ಮೊದಲನೇ ವಿಧದ ಗುರುಗಳನ್ನು ಅನುಸರಿಸುವವರದು ಪ್ರಾರಂಭ ಜನ್ಮಗಳು ಆದರೆ ಎರಡನೇ ವಿಧದ ಗುರುಗಳನ್ನು ಅನುಸರಿಸುವವರದು ಕೊನೆಯ ಜನ್ಮಗಳು.

(20) ಒಂದು ವಿಧವಾಗಿ ಮೊದಲನೇ ವಿಧದ ಗುರುಗಳನ್ನು ಅನುಸರಿಸುವವರು ಅವರ ಸ್ಥಾಯಿಯಿಂದ ಎರಡನೇ ವಿಧದ ಗುರುಗಳನ್ನು ಅನುಸರಿಸುವವರ ಸ್ಥಾಯಿಗೆ ಸೇರಬೇಕೆಂದರೆ ಕನಿಷ್ಠ 250 ರಿಂದ 300 ಜನ್ಮಗಳು ಬೇಕಾಗುತ್ತದೆ.

21) ಗಮನಿಸಿದರೆ ಮೊದಲನೆಯ ವಿಧದ ಗುರುಗಳನ್ನು ಅನುಸರಿಸುವವರಿಗೆ ಎರಡನೆ ವಿಧದ ಗುರುವು ಹೇಳುವುದು ಅರ್ಥವಾಗುವುದಿಲ್ಲ. ಅವರು ಒಪ್ಪಿಕೊಳ್ಳುವುದಿಲ್ಲ. ಹಾಗೆಯೇ ಎರಡನೇ ವಿಧದ ಗುರುಗಳನ್ನು ಅನುಸರಿಸುವವರಿಗೆ ಮೊದಲನೇ ವಿಧದ ಗುರುಗಳು ಹೇಳಿದ್ದು ಇಷ್ಟವಾಗುವುದಿಲ್ಲ.

ಆದ್ದರಿಂದ ಗುರುವಿನ ಹಿರಿಮೆ ಗುರುವನ್ನು ಅನುಸರಿಸುವ ಅಧಿಕ ಶಿಷ್ಯ ಗಣದ ಅನುಸಾರ ಇರುವುದೇ ಹೊರತು ಗುರು ಹೇಳುವ ಮಾತುಗಳ ಅನುಸಾರ ಇರುವುದಿಲ್ಲ. ಮಾಡಿಸುವ ಸಾಧನೆ, ಬೋಧಿಸುವ ಜ್ಞಾನದ ಅನುಸಾರವಾಗಿ ಇರುತ್ತದೆ. ಅಷ್ಟೇ ಅಲ್ಲ ಶಿಷ್ಯರ ಕೈಯಲ್ಲಿ ಎಂತಹ ಸಾಧನೆ ಮಾಡಿಸಿದರೆ, ದುಃಖದಿಂದ ಹೊರಬಂದು ಮೋಕ್ಷವನ್ನು ಹೊಂದಬಲ್ಲರು ಎನ್ನುವುದರ ಅನುಸಾರವಾಗಿಯೂ ಇರುತ್ತದೆ.... ಆದ್ದರಿಂದ ತಿಳಿದುಕೊಳ್ಳಿ ಗುರುವಿನ ಶಕ್ತಿಯನ್ನು ನೀಡುವ ಸಾಧನೆಯ ಅನುಸಾರ ಮತ್ತು, ಬೋಧಿಸುವ ಜ್ಞಾನದ ಅನುಸಾರವಾಗಿ ಮಾತ್ರ ಇರುತ್ತದೆ. ಹಾಗಾದರೆ ಯಾವ ಸಾಧನೆ ಉನ್ನತವಾದದ್ದು ಎನ್ನುವುದು ಹೇಗೆ ತಿಳಿಯುತ್ತದೆ?

ಯಾವ ಸಾಧನೆ ಮಾಡಿದರೆ ಅವರಲ್ಲಿನ ಕೆಟ್ಟದ್ದು ಅಂದರೆ ಕೆಟ್ಟ ಲಕ್ಷಣಗಳು, ಗುಣಗಳು, ಕೆಲಸಗಳು, ಕೆಟ್ಟ ಆಹಾರ ಪದ್ಧತಿ, ಮಾತುಗಳು,ಆಲೋಚನೆಗಳು, ಕೆಟ್ಟ ಅಭ್ಯಾಸಗಳು, ಕೆಟ್ಟವ್ಯಸನಗಳು ಹೋಗಿ, ಅವರ ಪ್ರವರ್ತನೆಯಲ್ಲಿ ಒಳ್ಳೆಯ ಬದಲಾವಣೆ ಬರುವುದೋ, ಅವರು ಪವಿತ್ರರಾಗುತ್ತಾರೆ ಅಂತಹ ಸಾಧನೆ ಉನ್ನತವಾದದ್ದು.

ಸಾಧನೆ ಮಾಡಿದವರಲ್ಲಿ ಆ ಬದಲಾವಣೆ ಬರದೆ ಹೋದರೆ, ಆ ಸಾಧನೆ ಉನ್ನತವಾದದ್ದಲ್ಲ ಎಂದು ತಿಳಿದುಕೊಳ್ಳಬೇಕು ಆಗ ಬೇರೆ ಗುರುಗಳನ್ನು ಹುಡುಕಿಕೊಳ್ಳಬೇಕು. ಆದರೆ ಅಂತಹ ಸಾಧನವನ್ನು ಬ್ರಹ್ಮರ್ಷಿ ಪತ್ರೀಜಿ ನಮ್ಮೆಲ್ಲರಿಗೂ ನೀಡಿದ್ದಾರೆ... ಅದೇ "ಶ್ವಾಸದ ಮೇಲೆ ಗಮನ" ಧ್ಯಾನ. ಧ್ಯಾನವನ್ನು ವಿಶೇಷವಾಗಿ ಮಾಡಿದರೆ, ಆ ಬದಲಾವಣೆಗಳು ಎಲ್ಲರಲ್ಲಿಯೂ ನೋಡಬಲ್ಲವರಾಗುತ್ತಾರೆ.

ಆದ್ದರಿಂದ ತಿಳಿದುಕೊಳ್ಳಿ ಆತ್ಮಜ್ಞಾನ ಬೋಧಿಸಬಲ್ಲ ಗುರುಗಳೇ, ಉನ್ನತವಾದವರು. ಅವರನ್ನು ಅನುಸರಿಸಬಲ್ಲ ಶಿಷ್ಯನ ಜೀವನ ಧನ್ಯ ಆದ್ದರಿಂದ ಅಂತಹ ಗುರುವನ್ನೇ ಆಯ್ಕೆ ಮಾಡಿಕೊಳ್ಳಬೇಕು.

**ಹಾಲು ಹಿಂಡುವಾಗ ಕೆಳಗೆ ಬಿಂದಿಗೆ ಇರಸದಿದ್ದರೆ ಹಾಲು ನೆಲದ ಪಾಲಾಗಿ ವ್ಯರ್ಥವಾಗುತ್ತದೆ. ಹಾಗೆಯೇ ಗುರುವು ಬೋಧಿಸುತ್ತಿರುವಾಗ ಮನಸ್ಸನ್ನು ಇರಿಸಿ ಕೇಳದಿದ್ದರೆ ಆ ಬೋಧನೆ ವ್ಯರ್ಥವಾಗುತ್ತದೆ.**

# ಶಿಷ್ಯನೆಂದರೆ?

**ಶಿಷ್ಯರಲ್ಲಿ ಎರಡು ವಿಧ 1) ಜ್ಞಾನಾರ್ಥಿ 2) ಮೋಕ್ಷಾರ್ಥಿ.**

ಜೇನುನೊಣ ಒಂದು ಹೂವಿನ ಮಕರಂದದಿಂದ ತೃಪ್ತಿಯಾಗುವುದಿಲ್ಲ ಅನೇಕ ಪುಷ್ಪಗಳ ಮೇಲೆ ಹಾರಿ ಮಧುವನ್ನು ಹೀರುತ್ತದೆ. ಒಳ್ಳೆಯ ಜೇನು ಹೊಟ್ಟೆ ತುಂಬಾ ಲಭಿಸುವವರೆಗೂ ಹೂಗಳ ಅನ್ವೇಷಣೆ ನಡೆಯುತ್ತಲೇ ಇರುತ್ತದೆ.

ಹಾಗೆಯೇ ಜ್ಞಾನಾರ್ಥಿಯಾದ ಶಿಷ್ಯನು ಒಬ್ಬ ಗುರುವಿನಿಂದ ತೃಪ್ತಿ ಹೊಂದುವುದಿಲ್ಲ, ತನ್ನ ಜ್ಞಾನದಾಹ ತೀರುವವರೆಗೂ,ಎಷ್ಟೋ ಜನ ಗುರುಗಳನ್ನು ದರ್ಶಿಸಿ ಅವರ ಸೇವೆಮಾಡುತ್ತಾನೆ. ಕೊನೆಗೆ ತನ್ನ ಜ್ಞಾನ ದಾಹಕ್ಕೆ, ಆಶಯಕ್ಕೆ ತಕ್ಕ ಗುರುವಿನ ಬಳಿ ಸ್ಥಿರಗೊಂಡು ಸರ್ವವನ್ನು ಸಮರ್ಪಣೆ ಮಾಡಿ, ಒಬ್ಬರನ್ನೇ ತನ್ನ ಗುರುದೇವನಾಗಿ ಭಾವಿಸುತ್ತಾನೆ. ಅವರಿಗೆ ಅಂಕಿತನಾಗುತ್ತಾನೆ. ಹಾಗೆ ಸದ್ಗುರು ಲಭಿಸುವವರೆಗೂ, ಅನ್ವೇಷಣೆ ಮುಂದುವರೆಯುತ್ತದೆ.

ಜಿಜ್ಞಾಸುಗಳು, ಗುಣವಂತರಾದ ಆತನ ಶಿಷ್ಯರು ಜ್ಞಾನಮೂರ್ತಿಗಳಾದವರನ್ನು ಗುರುವಾಗಿ ಅಂಗೀಕರಿಸುತ್ತಾರೆ. ಕಾಣಿಸಿದವರಿಗೆಲ್ಲ ನಮಸ್ಕಾರ ಮಾಡುವುದಿಲ್ಲ, ಗುರುವಿನ ವೇಷ ಭಾಷಣಗಳ ಅನುಸಾರವೆ ಆತ್ಮ ಸಂಸ್ಕಾರವನ್ನು, ಪ್ರಜ್ಞೆಯನ್ನು ಅಂದಾಜಿಸುವ ಶಕ್ತಿ, ಜಿಜ್ಞಾಸುಗಳಾದ, ಗುಣ ಸಂಪನ್ನರಾದ ಶಿಷ್ಯರಿಗೆ ಇರುತ್ತದೆ.

## ಶಿಷ್ಯನ ಅರ್ಹತೆಗಳು:–

ಸದ್ಗುರುಗಳು ಶಿಷ್ಯನನ್ನು ಸ್ವೀಕರಿಸುವ ಮೊದಲು ಅವರ ಗುಣ, ಗಣಗಳು, ಶೀಲ, ಸ್ವಭಾವಗಳು, ಪ್ರವರ್ತನೆ, ಕ್ರಮ ಶಿಕ್ಷಣ, ಸಂಸ್ಕಾರದಂತಹ ಎಷ್ಟೋ ವಿಷಯಗಳನ್ನು ಪರಿಗಣಿಸುತ್ತಾರೆ.

ಆತ್ಮಸ್ತುತಿ ಮಾಡಿಕೊಳ್ಳುತ್ತಾ, ಪರರನ್ನು ವಿಮರ್ಷಿಸುವವರು, ನಿಂದಿಸುವವರು, ಪಾಪ ಕಾರ್ಯಗಳನ್ನು ಮಾಡುವವರು, ದೈವ ಚಿಂತನೆ ಇಲ್ಲದವರು, ಆಧ್ಯಾತ್ಮಿಕ ಅವಗಾಹನೆ ಎಳ್ಳಷ್ಟು ಇಲ್ಲದವರು, ಮಂದ ಬುದ್ಧಿಗಳು, ಮೊಂಡು ಜನರು, ವ್ಯಸನಪರರು, ಕೃತಜ್ಞತೆ ಇಲ್ಲದವರು, ಆಚಾರ, ಸತ್ಪ್ರವರ್ತನೆ ಇಲ್ಲದವರನ್ನು ಸದ್ಗುರುಗಳು ಶಿಷ್ಯರನ್ನಾಗಿ ಸ್ವೀಕರಿಸುವುದಿಲ್ಲ ಅಂತಹವರು ಶಿಷ್ಯರಾಗಲು ಅರ್ಹತೆ ಇಲ್ಲದವರು.

ಸ್ವಧರ್ಮವನ್ನು ಪಾಲಿಸದವರನ್ನು, ಜ್ಞಾನ ತೃಷ್ಣೆಇಲ್ಲದವರನ್ನು, ನೈತಿಕ ಪ್ರವರ್ತನೆ ಇಲ್ಲದವರನ್ನು, ಪಾಪ ಭೀತಿ ಇಲ್ಲದವರನ್ನು ಸದ್ಗುರುಗಳು ಶಿಷ್ಯರಾಗಿ ಸ್ವೀಕರಿಸುವುದಿಲ್ಲ.

ಹಾಗಾಗಿ ಅಧಿಕ ವಿವೇಕ, ವಿಚಕ್ಷಣ ತೋರಬೇಕಾಗಿರುವುದು ಶಿಷ್ಯನೇ.. ಒಂದು ವಿಧವಾಗಿ ಗುರುವನ್ನು ಆಯ್ಕೆ ಮಾಡಿಕೊಳ್ಳುವುದು ಕಷ್ಟವಾದ ಕೆಲಸ. ಕಾರಣ ಸದ್ಗುರುಗಳು, ಶಿಷ್ಯನ ಅಂದಾಜಿಗೆ, ಮೇದಸ್ಸಿನ ಅನುಸಾರ ಒಂದೇ ಬಾರಿಗೆ ಅರ್ಥವಾಗುವುದಿಲ್ಲ. ಶಿಷ್ಯನ ಪೂರ್ವಜನ್ಮ ಸುಕೃತ ಈ ಜನ್ಮದಲ್ಲಿ ಮಾಡಿರುವ ಪುಣ್ಯದಿಂದ ಸದ್ಗುರುಗಳು ಲಭಿಸುತ್ತಾರೆ.

## ಶಿಷ್ಯನ ಪ್ರವರ್ತನೆ:-

ಶಿಷ್ಯನಿಗೆ ಸದ್ಗುರು ಲಭಿಸಿದ ನಂತರ ಗುರುವನ್ನು ಮರೆಯಬಾರದು. ಅವರಿಗೆ ತೊಂದರೆ ಕೊಡಬಾರದು. ಗುರುವಿನಲ್ಲಿ ಇಲ್ಲದ ಶಕ್ತಿಗಳು ತನಗೆ ಬಂದರೂ ಅವು ಅನನ್ಯ ಗುರುಭಕ್ತಿಯಿಂದಲೇ ತನಗೆ ಲಭಿಸಿದೆ ಎಂದುಕೊಳ್ಳಬೇಕು. ಅಹಂಕಾರ ಪಡಬಾರದು. ಹಾಗೆ ಮಾಡಿದರೆ ಪರಿಪೂರ್ಣತೆ ಹೊಂದಲು ಸಾಧ್ಯವಿಲ್ಲ.

ಶಿಷ್ಯನು ಎಷ್ಟು ವಿವೇಕವಂತನಾದರೂ, ಪಂಡಿತನಾದರೂ, ಹೆಸರು ಪ್ರಖ್ಯಾತಿಗಳು ಉಳ್ಳವನಾದರೂ, ಅವನು ಗುರುವಿನ ನಂತರವೇ... ಗುರುವು ಶಿಷ್ಯನನ್ನು ಯಾವಾಗಲೂ ಮೆರೆಸುವುದಿಲ್ಲ, ಉನ್ನತವಾದವನು, ಜ್ಞಾನಿ, ಉತ್ತಮೋತ್ತಮನೆಂದು ಹೊಗಳುವುದಿಲ್ಲ. ಶಿಷ್ಯನು ಸಾಧನೆ ಮಾಡಿ ಔನ್ನತ್ಯವನ್ನು ಸಂಪಾದಿಸುತ್ತಾ, ತಗ್ಗಿ ಬಗ್ಗಿ ನಡೆಯಬೇಕೆ ಹೊರತು ಅಹಂಕಾರ ಪಡಬಾರದು. ಏಕೆಂದರೆ ಎಷ್ಟು ಕಲಿತರು ಗುರುವಿನಿಂದ ಕಲಿಯಬೇಕಾದದ್ದು ತುಂಬಾ ಇರುತ್ತದೆ.

ಶಿಷ್ಯನು ತಾನು ಪುರೋಗಮನ ಸಾಧಿಸುತ್ತಿದ್ದೇನೆ ಎಂದುಕೊಳ್ಳಬಹುದು . ಆದರೆ ಗುರುವು ಅವನಿಗಿಂತ ಪುರೋಗಮನ ಸಾಧಿಸುತ್ತಾ ಹೋಗಿರುತ್ತಾನೆ. ಅಭಿಮಾನ ಹೊಗಳಿಕೆ, ಶಿಷ್ಯನ ಅಭ್ಯುದಯಕ್ಕೆ ಅಡಚಣೆಯಾಗುತ್ತದೆ ಎಂದು ಗುರುಗಳಿಗೆ ತಿಳಿದಿದೆ, ಹಾಗಾಗಿ ಹೊಗಳುವುದಿಲ್ಲ.

ಕನಸಿನಲ್ಲಿಯೂ ಕೂಡ ಗುರುವಿನ ಲೋಪಗಳನ್ನು ಎಣಿಸಬಾರದು. ಗುರುವಿನ ನಂತರವೇ ತಾನು ಎನ್ನುವ ವಿಷಯವನ್ನು ಮರೆಯಬಾರದು. ಜೀವಿಸಿದಷ್ಟು ಕಾಲ ಶಕ್ತಿ

ಅನುಗ್ರಹಿಸುವುದು, ಬೆಳಕನ್ನು ಪ್ರಸಾದಿಸುವುದು ಗುರುವೇ ಎಂದು ನಂಬಬೇಕು. ಗುರುವನ್ನು ನಿರ್ಲಕ್ಷ್ಯ ಮಾಡಿದ ಯಾರಾದರೂ ಪತನ ಹೊಂದುತ್ತಾರೆ.

ಗುರುವಿನ ಸಮಕ್ಷಮದಲ್ಲಿ ವಿನಯ ವಿಧೇಯತೆಗಳೊಂದಿಗೆ ವರ್ತಿಸಬೇಕು. ಎಂತಹ ಪರಿಸ್ಥಿತಿಯಲ್ಲೂ ಸುಳ್ಳುಗಳನ್ನು ಹೇಳಬಾರದು. ಆತನ ಸನ್ನಿಧಿಯಲ್ಲಿ ಅಸಹನೆಯಿಂದ,ಅಯಿಷ್ಟತೆಯಿಂದ, ಕಿರಿಕಿರಿಯಿಂದ ಕೂಡಿ ಇರಬಾರದು. ಗುರು ಕುಳಿತುಕೊಂಡಿರುವ ಕಡೆ ಎತ್ತರದಲ್ಲಾದಲಿ, ಮೊದಲೇ ಆಗಲಿ ಕುಳಿತುಕೊಳ್ಳಬಾರದು. ತಾನು ಗುರುವಿಗಿಂತ ಚಿಕ್ಕವನೇ ಇನ್ನೂ ವಿದ್ಯಾರ್ಥಿಯೇ ಎನ್ನುವ ಭಾವದಿಂದ ನಡೆದುಕೊಳ್ಳಬೇಕು.

ಅನಗತ್ಯವಾಗಿ ಬಾಯಿ ತೆರೆಯಬಾರದು, ವಿತಂಡವಾದ ಮಾಡಬಾರದು, ಬುದ್ಧಿವಂತ ಎನಿಸಿಕೊಳ್ಳಲು ಪ್ರಯತ್ನಿಸಬಾರದು. ತನಗೆ ತಿಳಿದಿರುವುದಕ್ಕಿಂತ ಗುರು ಹೇಳಿರುವುದು ಭಿನ್ನವಾಗಿರಬಹುದು.. ಅದರಲ್ಲಿ ಆತನ ಅನುಭವ ಇರುತ್ತದೆ. ಗುರುವನ್ನು ಚರ್ಚೆಯಲ್ಲಿ ಸೋಲಿಸಬೇಕೆಂದು, ಅವಮಾನಿಸಬೇಕೆಂದು, ತನ್ನ ಹೆಚ್ಚುಗಾರಿಕೆ ಪ್ರದರ್ಶಿಸಬೇಕೆಂದು ಆಲೋಚನೆ ಮಾಡುವ ಶಿಷ್ಯನು, ಮರುಜನ್ಮದಲ್ಲಿ ಕ್ರೂರವಾಗಿ ಜೀವಿಸಬೇಕಾಗಿರುತ್ತದೆ.

ಮಾನವನಿಗೆ ಇರುವ ಮೂರು ವಿಧದ ಶಾಪಗಳಾದ ಋಷಿ ಶಾಪ, ನಾಗಶಾಪ, ದೇವತಾ ಶಾಪದಿಂದ ರಕ್ಷಿಸುವವನೇ ಗುರು... ಹರಕೆಗಳು ತೀರಿಸದಿದ್ದರೆ ಆಗ್ರಹಿಸುವ ಕ್ಷುದ್ರ ದೇವತೆಗಳಿಂದ ರಕ್ಷಿಸಬಲ್ಲವನು ಕೂಡ ಗುರುವೇ.

ಅಂತಹ ಗುರುವನ್ನು ಅವಮಾನಿಸಿದವನು, ಕೀಳಾಗಿ ನೋಡಿದವನು ಘೋರವಾಗಿ ಪತನ ಹೊಂದುತ್ತಾನೆ, ಭ್ರಷ್ಟನಾಗುತ್ತಾನೆ. ಆದ್ದರಿಂದ ಸತ್ಪ್ರವರ್ತನೆಯೊಂದಿಗೆ ಗುರುವನ್ನು ಹೊಂದಬೇಕು ವಿದ್ಯಾರ್ಥಿಯಾಗದೆ ಶಿಷ್ಯನಾಗಬೇಕು.

## ಗುರುಗಳ ಕೋಪ!

**ಕರ್ಮಣ್ಯ ಕರ್ಮಶೂಯಃ ಪಶ್ಯೇದ ಕರ್ಮಣಿ ಚ ಕರ್ಮ ಯಃ**

**ನ ಬುದ್ದಿಮಾನ್ ಮನುಷ್ಯೇಷು ನ ಯುಕ್ತಃ ಕೃತ್ಸ್ನಾ ಕರ್ಮಕೃತ್!! (ಭ.ಗಿ.4–18)**

ತಾ॥: ಯಾರು ಕರ್ಮದಲ್ಲಿ ಅಕರ್ಮವನ್ನು, ಅಕರ್ಮದಲ್ಲಿ ಕರ್ಮವನ್ನು ನೋಡುವನು ಅವನು ಬುದ್ಧಿವಂತನು! ಅವನೇ ಯೋಗಿಯಾಗುವವನು, ಸಕಲ ಕರ್ಮಗಳು ಆಚರಿಸಿದವನಾಗುವನು.

ಏಕೆಂದರೆ ಎಲ್ಲದರಲ್ಲೂ ಮನಸೇ ಪ್ರಧಾನವಾಗುವುದರಿಂದ ಕರ್ಮ ಮಾಡದೇ ಇರುವವರಿಗೆ, ಕರ್ಮ ಮಾಡಿದವರಿಗೆ ಅವರವರ ಭಾವವನ್ನು ಅನುಸರಿಸಿಯೇ ಫಲಿತ ಉಂಟಾಗುತ್ತದೆ ಹೊರತು ಮಾಡಿದ ಕರ್ಮಗಳ ಅನುಸಾರ ಮಾತ್ರವಲ್ಲ ಇದನ್ನೆ ಶ್ರೀ ಕೃಷ್ಣ ಪರಮಾತ್ಮ ಮೇಲಿನ ಶ್ಲೋಕದ ಮೂಲಕ ಹೇಳಿರುವುದು, ಇದು ತುಂಬಾ ಜನರಿಗೆ ಅರ್ಥವಾಗದೆ ಕರ್ಮವನ್ನು ನೋಡುತ್ತಿದ್ದಾರೆ ಹೊರತು ಆ ಕರ್ಮದಲ್ಲಿ ಅವರ ಭಾವವನ್ನು ಗ್ರಹಿಸದೆ ಇದ್ದಾರೆ ದೊಡ್ಡ ಯೋಗೀಶ್ವರನಾದ ಶ್ರೀ ಕೃಷ್ಣ ಪರಮಾತ್ಮ ಹೇಳಿದ್ದು ಸಾಮಾನ್ಯರು ಅರ್ಥ ಮಾಡಿಕೊಳ್ಳುವುದು ತುಂಬಾ ಕಷ್ಟ ಅರ್ಥ ಮಾಡಿಕೊಳ್ಳಲಾರರು ಕೂಡಾ..

### ಈ ಸಂಘಟನೆಯನ್ನು ನೋಡೋಣ.

ಇಬ್ಬರು ಸಾಧುಗಳು ಪ್ರಯಾಣ ಮಾಡುತ್ತಿದ್ದರು ಅವರಿಗೆ ದಾರಿಯಲ್ಲಿ ಒಂದು ನೀರಿನ ತೊರೆಯು ಅಡ್ಡ ಬಂದಿತು. ಅಲ್ಲಿ ಒಬ್ಬ ಸ್ತ್ರೀ ಆ ತೊರೆಯನ್ನು ದಾಟಲಾರದೆ ಅಲ್ಲೇ ನಿಂತಿದ್ದಳು. ಈ ಸಾಧುಗಳನ್ನು ನೋಡಿದ ಕೂಡಲೇ ಆಕೆ ಅವರನ್ನು ಆ ತೊರೆಯನ್ನು ದಾಟಿಸಬೇಕೆಂದು ಪ್ರಾರ್ಥಿಸಿದಳು ಕೂಡಲೇ ಅವರಿಬ್ಬರಲ್ಲಿ ಒಬ್ಬ ಸಾಧು ಆಕೆಯನ್ನು ಎತ್ತಿಕೊಂಡು ಆ ತೊರೆಯನ್ನು ದಾಟಿಸಿದನು.

ನಂತರ ಇಬ್ಬರೂ ತಮ್ಮ ದಾರಿಯಲ್ಲಿ ಹೊರಟರು ಸ್ವಲ್ಪ ದೂರ ಹೋದ ನಂತರ ಎರಡನೆಯ ಸಾಧು "ಏನಯ್ಯ ಒಬ್ಬ ಸ್ತ್ರೀಯನ್ನು ಮುಟ್ಟಿಕೊಂಡು ಅಪಚಾರ ಮಾಡಿರುವೆ" ಎಂದು ಹೇಳಿದನು. ಆಗ ಮೊದಲನೇ ಸಾಧು "ನಾವು ತುಂಬಾ ದೂರ ಬಂದಿದ್ದೇವೆ,

ನೀನು ಆಕೆಯನ್ನು ಇನ್ನು ಹೊತ್ತುಕೊಂಡು ಇರುವೆ, ನಾನು ಆಕೆಯನ್ನು ಅಲ್ಲಿಗೆ ಬಿಟ್ಟು ಬಂದಿರುವೆ" ಎಂದು ಹೇಳಿದನು.

ಇಲ್ಲಿ ಗ್ರಹಿಸಬೇಕಾದದ್ದು..., ಸ್ತ್ರೀಯನ್ನು ಮುಟ್ಟಿಕೊಳ್ಳದಿದ್ದರೂ ಎರಡನೇ ಸಾಧುವಿನ ಮನಸ್ಸಿನಲ್ಲಿ ಆ ಭಾವ ಇರುವುದರಿಂದ ಎರಡು ಕಿಲೋಮೀಟರ್ ದೂರ ಬಂದರು ಸಹ ಆಕೆಯನ್ನು ಮರೆಯಲಾರದೆ ಹೋಗಿದ್ದರಿಂದ ಭೌತಿಕವಾಗಿ ಕರ್ಮ ಮಾಡದಿದ್ದರೂ ಮಾನಸಿಕವಾಗಿ ಕರ್ಮ ಮಾಡಿದವನಾದನು.

ಮೊದಲನೆಯ ಸಾಧು ಸ್ತ್ರೀಯನ್ನು ಮುಟ್ಟಿಕೊಂಡರು ಮನಸ್ಸಿನಲ್ಲಿ ಆ ಭಾವ ಇಲ್ಲದೆ ಇದ್ದುದರಿಂದ ಕರ್ಮ ಮಾಡಿದರು ಕರ್ಮ ಮಾಡದವನಾದನು. ಆದ್ದರಿಂದ ಶ್ರೀ ಕೃಷ್ಣ ಭಗವಾನನು ಹೇಳಿದ ಪ್ರಕಾರ ಕರ್ಮದಲ್ಲಿ ಅಕರ್ಮ ಅಂದರೆ.., ಕರ್ಮ ಮಾಡಿದರು ಭಾವ ಶುದ್ಧವಾಗಿ ಇದ್ದರೆ ಮೊದಲನೆಯ ಸಾಧುವಿನ ಹಾಗೆ ಯೋಗಿಯಾಗಿ ಪರಿಗಣಿಸಲ್ಪಡುತ್ತಾನೆ.

ಹಾಗೆಯೇ ಪತ್ರೀಜಿಯನ್ನು ನೋಡಿ ತುಂಬಾ ಜನರು "ಅದೇನೋ ಭಗವಂತ ಎನ್ನುತ್ತಾರೆ ಆತನಿಗೆ ಏನು ಅಷ್ಟು ಕೋಪ? ಎಂದು ಹೇಳುತ್ತಾರೆ. ಕೆಲವರು ಮುಂದೆ ಹೇಳಲಾರದಿದ್ದರೂ, ತಮ್ಮೊಳಗೆ ಅಂದುಕೊಳ್ಳುತ್ತಾರೆ. ಆತನೊಂದಿಗೆ ಸನ್ನಿಹಿತವಾಗಿ ಇರುವವರಿಗೂ ಇದು ಅರ್ಥವಾಗುವುದಿಲ್ಲ.

ಅವರಿಗೆ ಕೋಪ ಬರುವುದು, ಬೇರೆಯವರ ತಪ್ಪು ಮಾತಿನ ಮೇಲೆ, ಅವರ ಕೆಲಸಗಳ ಮೇಲೆ ಹೊರತು ವ್ಯಕ್ತಿಗತವಾಗಿ ಯಾರ ಮೇಲೆ ಕೋಪ ಇರುವುದಿಲ್ಲ. ಪತ್ರೀಜಿ ಭಾವ ಅವರ ಜೀವನವನ್ನು ಸರಿ ಮಾಡಲು ಅವರ ಗುಣಗಳನ್ನು ಬದಲಾಯಿಸಲು ಹೊರತು ಅವರ ಮೇಲೆ ಕಕ್ಷೆಯಿಂದ ಅಲ್ಲ. ಏಕೆಂದರೆ ಆತನಿಗೆ ಶತ್ರುಗಳಿಲ್ಲ ಮಿತ್ರರು ಇಲ್ಲ ಆದ್ದರಿಂದ ಆತ ಕರ್ಮ ಮಾಡಿದಂತೆ ಕಾಣಿಸಿದರು ಅವರು ಅಕರ್ಮಿಯೇ ಅಂದರೆ ಕರ್ಮ ಮಾಡದೇ ಇರುವವರು.

ಹಾಗೆಯೇ ಆತನ ಬಳಿಗೆ ಯಾರು ಬಂದರು ಜ್ಞಾನ ಹೊಂದಲು ಬರುತ್ತಾರೆ ಎಂದು ಭಾವಿಸುತ್ತಾರೆ. ಜ್ಞಾನಕ್ಕಾಗಿ ಬಂದವರನ್ನು ಯಾವ ಗುರುವಾದರೂ ಅವರ ಅಹಂಕಾರವನ್ನು ಹೋಗಲಾಡಿಸಲು ಪ್ರಯತ್ನಿಸುತ್ತಾರೆ. ಅವರ ಅಹಂಕಾರ ಸ್ಥಿತಿಯನ್ನು

ನೋಡಿ ಅವರ ಮೇಲೆ ಕೋಪ ಮಾಡಿಕೊಳ್ಳುತ್ತಾರೆ. ಒಬ್ಬರ ಮೇಲೆ ಸಿಡಿಮಿಡಿಗೊಳ್ಳುತ್ತಾರೆ. ನೋಡಿಯೂ ನೋಡದಂತೆ ಇರುತ್ತಾರೆ. ಒಬ್ಬರನ್ನು ಆಪ್ಯಾಯಮಾನವಾಗಿ ಮಾತನಾಡಿಸುತ್ತಾರೆ, ಒಬ್ಬರನ್ನು ಆಲಂಗಿಸಿಕೊಳ್ಳುತ್ತಾರೆ, ಒಬ್ಬರನ್ನು ಹೊಡೆಯುತ್ತಾರೆ ಹೀಗೆ ವಿಧವಿಧವಾಗಿ ಅವರ ಪ್ರವರ್ತನೆ ಇರುತ್ತದೆ.

ಹಾಗೆ ಗುರುವಿನ ಪ್ರವರ್ತನೆ ಯಾವಾಗಲೂ ಒಂದೇ ವಿಧವಾಗಿ ಇರುವುದಿಲ್ಲ ಶಿಷ್ಯರ ಗುಣಗಳ ಅನುಸಾರ ಇರುತ್ತದೆ. ಶಿಷ್ಯನಲ್ಲಿ ಅಹಂಕಾರವನ್ನು ಹೋಗಲಾಡಿಸಿ ಅವರನ್ನು ಜ್ಞಾನವಂತರಾಗಿ ಮಾಡಲು ಯಾವ ಗುರುವಾದರೂ ಪ್ರಯತ್ನಿಸುತ್ತಾನೆ. ಅದೇ ಪತ್ರೀಜಿಯವರ ಉದ್ದೇಶ, ಆದ್ದರಿಂದ ಕರ್ಮಗಳನ್ನು ಮಾಡುತ್ತಿದ್ದರು ಅವರು ಅಕರ್ಮರು. ಯಾವ ಕರ್ಮವಾದರೂ ಅವರಿಗೆ ಅಂಟುಕೊಳ್ಳುವುದಿಲ್ಲ. ಶ್ರೀ ಕೃಷ್ಣ ಭಗವಾನನು ಹೇಳಿದ್ದು ಅದೆ ಅಂತಹ ಯೋಗೇಶ್ವರನಾದ ಬ್ರಹ್ಮರ್ಷಿ ಪತ್ರೀಜಿಯವರನ್ನು ಸಾಮಾನ್ಯ ಜನರು ಹೇಗೆ ಅರ್ಥಮಾಡಿಕೊಳ್ಳಬಲ್ಲರು?.

ಚಿನ್ನದ ಅಂಗಡಿಗೆ ಹೋಗಿ ಚಿನ್ನವನ್ನು ಕೇಳದೆ ತರಕಾರಿಗಳನ್ನು ಕೇಳಿದರೆ ಹೇಗಿರುವುದು!? ಬ್ರಹ್ಮಜ್ಞಾನಿಯಾದ ಪತ್ರೀಜಿ ಬಳಿಗೆ ಹೋಗಿ ಜ್ಞಾನವನ್ನು ಕೇಳದೆ ನಮ್ಮ ಮಗನಿಗೆ ಉದ್ಯೋಗ ಬರುವುದೇ? ನಮ್ಮ ಮಗಳಿಗೆ ಮದುವೆಯಾಗುವುದೇ? ನನ್ನ ಆರೋಗ್ಯ ಸರಿ ಹೋಗುವುದೇ? ಎಂದು ಕೇಳಿದರೆ ಹೇಗಿರುತ್ತದೆ ಅವರನ್ನು ಸಂಪೂರ್ಣವಾಗಿ ತಿಳಿದುಕೊಂಡಿಲ್ಲ.

ಪತ್ರೀಜಿ ಕೋಪವನ್ನು ಅರ್ಥಮಾಡಿಕೊಳ್ಳಬೇಕೆಂದರೆ ಅಸಂಗತ್ವ ಅಂದರೆ ಏನು ಎಂದು ತಿಳಿದುಕೊಳ್ಳಬೇಕು, ಕೃಷ್ಣ ಪರಮಾತ್ಮ ಹೇಳಿದ್ದು ಅರ್ಥಮಾಡಿಕೊಳ್ಳಬೇಕು. ಧ್ಯಾನ ಮಾಡಿ ಸ್ಥಿತಿಯನ್ನು ಹೆಚ್ಚಿಸಿಕೊಳ್ಳಬೇಕು. ಅನಗತ್ಯವಾಗಿ ಗುರುವನ್ನು ವಿಮರ್ಶಿಸಬಾರದು. ತಪ್ಪಾಗಿ ಭಾವಿಸಬಾರದು, ಮೊದಲು ಶಿಷ್ಯನಾದವನು ತನ್ನ ಜೀವನವನ್ನು ಸರಿಮಾಡಿಕೊಳ್ಳಬೇಕು.

# ಅನುಬಂಧ

## ಪತ್ರೀಜಿ ಸಂದೇಶಗಳು

"ಗುರುಗಳು ಯಾವಾಗಲೂ ಇರುತ್ತಾರೆ!" ಹೇಳುವವರು ಯಾವಾಗಲೂ ಇರುತ್ತಾರೆ. ಕೇಳುವವನೇ ಇರುವುದಿಲ್ಲ – ಎನ್ನುತ್ತಿದ್ದರು ಶ್ರೀ ಸದಾನಂದ ಯೋಗಿ.

ಶಿಷ್ಯನ ಸರಿಯಾದ ಸಮಯಕ್ಕೆ ಗುರುಗಳು ಬಂದೇ ಬರುತ್ತಾರೆ. ಅದು ಭೌತಿಕವಾಗಿ ಅಥವಾ ಸೂಕ್ಷ್ಮ ಶರೀರದಿಂದಾಗಲಿ ಆಗಬಹುದು.

ಆದ್ದರಿಂದ ನಾವು ಸರಿಯಾದ ಸ್ಥಿತಿಯಲ್ಲಿರುವೆವೆ ಇಲ್ಲವೇ, ಎಂದು ಆಗಾಗ ನಮ್ಮನ್ನು ನಾವು ಪರೀಕ್ಷಿಸಿಕೊಳ್ಳಬೇಕು. ನಾವು ಸರಿಯಾದ ಸ್ಥಿತಿಯಲ್ಲಿ ಇಲ್ಲದಿದ್ದರೆ ಗುರುಗಳು ಭೌತಿಕವಾಗಿ ನಮ್ಮ ಮನೆಯಲ್ಲಿಯೇ ಇದ್ದರೂ ನಮಗೆ ಅರ್ಥವಾಗುವುದಿಲ್ಲ.

**ಪ್ರಾಪಂಚಿಕ ಶಿಷ್ಯರಿಗೆ ಸಂಕುಚಿತ ಮನೋಭಾವವಿರುವವರಿಗೆ, ಮೋಸ ಮಾಡುವ ಗುರುಗಳೆ ದೊರೆಯುತ್ತಾರೆ.**

**ಮೋಕ್ಷಕ್ಕೆ ಅರ್ಹರಾದ ಶಿಷ್ಯರಿಗೆ ಮೋಕ್ಷವನ್ನು ಹೊಂದಿರುವ ಗುರುಗಳೇ ದೊರಕುತ್ತಾರೆ.**

## "ಗುರು – ಲಘು"

"ಗುರು" ಎಂದರೆ ಭಾರವಾದವನು, ಎಂದು ಅರ್ಥ. ಅಂದರೆ ಜ್ಞಾನದೊಂದಿಗೆ, ಅನುಭವದೊಂದಿಗೆ ಭಾರವಾಗಿರುವವನು 'ಗುರು' ಎನ್ನುವ ಪದಕ್ಕೆ ವಿರುದ್ಧ ಪದವೇ 'ಲಘು'.

'ಲಘು 'ಎಂದರೆ ಹಗುರವಾದವನು ಎಂದರ್ಥ. ಅಂದರೆ ಜ್ಞಾನ ಅನುಭವವಿಲ್ಲದೆ ಹಗುರವಾಗಿ ಇರುವವನು, ಟೊಳ್ಳು ಎಂದು ಅರ್ಥ.

'ಗುರು' 'ಶಿಷ್ಯ' ಎನ್ನುವ ಪದಗಳಲ್ಲಿ ಕಲಿಸುವವನು, ಕಲಿತುಕೊಳ್ಳಲ್ಪಡುವವನು ಎನ್ನುವ ಅರ್ಥ ಸಾಮಾನ್ಯವಾಗಿ ಇರುತ್ತದೆ. ಆದರೆ ಗುರು ಎಂದರೆ ಕಲಿಸುವವನಲ್ಲ ;

ಶಿಷ್ಯ ಎಂದರೆ ಕಲಿಸಲ್ಪಡುವವನು ಅಲ್ಲ! ಯಾರಿಗೆ ಯಾರು ಯಾವುದನ್ನು ಕಲಿಸಲಾರರು;

ಆದರೆ ತಮ್ಮಷ್ಟಕ್ಕೆ ತಾವು ತಮ್ಮ ತಮ್ಮ ಸಾಧನ ಕಾರ್ಯಕ್ರಮಗಳ ಮೂಲಕ ಕಲಿತುಕೊಂಡಿರುವವರ ಕೌಶಲ್ಯವನ್ನು ನೋಡಿ ಕಲಿಯುವವರು ಹೆಚ್ಚು. 'ಲಘು'ಗಳು ತಕ್ಕ ಸಾಧನಾ ತಕ್ಕ ಸಾಧನ ಕಾರ್ಯಕ್ರಮದ ಮೂಲಕ ಗುರುಗಳಾಗುತ್ತಾರೆ.

ಆದ್ದರಿಂದ " 'ಗುರು' ಎಂದರೆ 'ಬೋಧಕ'ನಲ್ಲ" ಎಂದು ತಿಳಿದುಕೊಳ್ಳಬೇಕು. ಗುರು ಎಂದರೆ ಸಾಧನೆ ಮೂಲಕ ಸಿದ್ಧನಾದವನು ಎಂದು ಅರ್ಥ. ಇದು ಅರ್ಥವಾದಾಗ 'ಗುರು' ಎನ್ನುವ ವ್ಯಕ್ತಿಯ ಹಿಂದೆ ಹಿಂಬಾಲಿಸುವುದು ಇರುವುದಿಲ್ಲ; 'ಸಾಧನೆ' ಎನ್ನುವ ಕಾರ್ಯಕ್ರಮದ ಹಿಂದೆ ಹೋಗಲು ಆರಂಭವಾಗುವುದು!

**ಆಧ್ಯಾತ್ಮಿಕ ಶಾಸ್ತ್ರ ಅಧ್ಯಯನದ ಮೂಲಕ, ಯೋಗ ಸಾಧನೆಯ ಮೂಲಕ, 'ಲಘುಗಳು' ಕ್ರಮೇಣ ಗುರುಗಳು ಆಗುತ್ತಾರೆ.**

'ಭಕ್ತನು' ಯಾವಾಗಲೂ ಬಾಹ್ಯ ಚೇಷ್ಟಗಳಲ್ಲಿ ನಿಮಗ್ನನಾಗಿ ಇರುತ್ತಾನೆ. ಅಂದರೆ ಪೂಜೆಗಳು, ಅಭಿಷೇಕಗಳು, ಅರ್ಚನೆಗಳು..ಮೊದಲಾದವುಗಳಲ್ಲಿ ಮುಳುಗಿರುತ್ತಾನೆ. ಭಯಗ್ರಸ್ತನಾಗಿ ಇರುವವನೇ ಭಕ್ತ.

ಸ್ವಲ್ಪ ಉನ್ನತ ಸ್ಥಿತಿಗೆ ಏರಿದ ಪಕ್ಷದಲ್ಲಿ ಭಕ್ತನು ಮಂತ್ರಾನುಷ್ಠಾನ ಮಾಡುತ್ತಾ ಇರುತ್ತಾನೆ.. ಅಷ್ಟೇ ಹೊರತು ಜಿಜ್ಞಾಸುವಾಗಿ, ಜ್ಞಾನಪಿಪಾಸಿಯಾಗಿ ಬದಲಾಗಲು ಯಾವ ಭಕ್ತನು ಇಷ್ಟಪಡುವುದಿಲ್ಲ.

"ಪಾಹಿಮಾಮ್! ಪಾಹಿಮಾಮ್" ಎಂದು ಒಬ್ಬ ಭಕ್ತನು ಯಾವಾಗಲೂ ಆರ್ತನಾದಗಳನ್ನು ಮಾಡುತ್ತಾನೆ. ತನ್ನ ಸುತ್ತಲೂ ಯಾವಾಗಲೂ ಕಷ್ಟಗಳನ್ನೇ,ಆಪತ್ತುಗಳನ್ನೇ ಭಕ್ತನಾದವನು ನೋಡುತ್ತಾನೆ.

ಒಬ್ಬ ಭಕ್ತನು ಗುರುಗಳನ್ನು, ಪರಮ ಗುರುಗಳನ್ನು ಯಾವಾಗಲೂ, ಭಗವಂತನ 'ಅವತಾರಗಳಾಗಿ' ತಿಳಿದುಕೊಂಡಿರುತ್ತಾನೆ.

ಯಾವ ಭಕ್ತನು ತಾನು ಸಹ ಅವರಂತೆ ಆಗಬೇಕೆಂದು, ಹಾಗೆ ಇರಬೇಕೆಂದು ಯೋಚಿಸುವುದಿಲ್ಲ. ಆದರೆ ಶಿಷ್ಯನಾದವನು ತಾನು ಗುರುಗಳ ಹಾಗೆ ಪರಮ ಗುರುಗಳ ಹಾಗೆ ಆಗಬೇಕೆಂದು, "ಅವರು ಪರಮ ಗುರುಗಳಾದಾಗ ನಾನು ಕೂಡ ಅವರ ಹಾಗೆ ಆಗಬಲ್ಲೆನು" ಎನ್ನುವುದನ್ನು ಗ್ರಹಿಸಿ ದೀಕ್ಷೆಯಿಂದ ಧ್ಯಾನವನ್ನು ಆರಂಭಿಸುತ್ತಾನೆ. ಶಿಷ್ಯನು ಭಯವನ್ನು ತನ್ನ ಅಧೀನದಲ್ಲಿಟ್ಟುಕೊಳ್ಳುತ್ತಾನೆ. ಪಾಹೀಮಾಮ್ ಎಂದು ಯಾವಾಗಲೂ ಬೇಡುವುದಿಲ್ಲ. ಯಾವ ಆಪತ್ತನ್ನು ಲೆಕ್ಕಿಸುವುದಿಲ್ಲ. ಈತನೇ ಜಿಜ್ಞಾಸು, ಕ್ರಮ ಕ್ರಮವಾಗಿ ಮುಮುಕ್ಷುವಾಗುತ್ತಾನೆ. ಮುಮುಕ್ಷು ಎಂದರೆ ತೀವ್ರವಾದ ಧ್ಯಾನ ಸಾಧನೆ ಮಾಡುವವನು.

**ಮೂಢಭಕ್ತಿಯಿಂದ ಬರುವುದೇನು ಇಲ್ಲ; ಇರುವುದು ನಶಿಸುತ್ತದೆ; ತಕ್ಷಣ ಕರ್ತವ್ಯವೆಂದರೆ, 'ಶಿಷ್ಯ'ನಂತೆ ಬದಲಾಗುವುದು.**

## 'ಗುರು – ಪರಮಗುರು'

ಇಂದಿನ ಶಿಷ್ಯನೇ ನಾಳಿನ ಗುರು.

"ಗುರು" ಎಂದರೆ "ಭಾರವಾಗಿರುವವನು" –

"ಜ್ಞಾನ" ದೊಂದಿಗೆ "ಭಾರವಾಗಿರುವವನು ಎಂದರ್ಥ.

ಇಂದಿನ ಮುಮುಕ್ಷುಗಳೇ ನಾಳೆಯ ಮುಕ್ತ ಪುರುಷರು, ಗುರುಗಳು. ಧ್ಯಾನದ ಮೂಲಕ ದಿವ್ಯ ಚಕ್ಷುವನ್ನು ಸಂಪಾದಿಸಿಕೊಂಡು, ಆತ್ಮಜ್ಞಾನವನ್ನು ಹೊಂದಿದವನೇ "ಗುರು"

"ಪರಮ ಗುರು" ಎಂದರೆ, ಬ್ರಹ್ಮಜ್ಞಾನದೊಂದಿಗೆ ತುಂಬಾ ಭಾರವಾಗಿರುವವನು... ಎಂದರ್ಥ. ಇಂದಿನ ಋಷಿ, ನಾಳೆಯ ರಾಜರ್ಷಿ, ಮಾರನೇ ದಿನ ಬ್ರಹ್ಮರ್ಷಿಯಾಗುತ್ತಾನೆ.

**ದಿವ್ಯ ಚಕ್ಷುವನ್ನು ಸಂಪಾದಿಸಿಕೊಂಡವನು ಗುರು, ಋಷಿ. ದಿವ್ಯಚಕ್ಷುವನ್ನು ಸಂಪೂರ್ಣವಾಗಿ ಪರಿಪಕ್ವವಾಗಿಸಿಕೊಂಡವನೇ ಪರಮಗುರು, ರಾಜರ್ಷಿ, ಬ್ರಹ್ಮರ್ಷಿ.**

# “ಧ್ಯಾನ ಮಾಡುವ ವಿಧಾನ”

**ಯಾವುದಾದರೂ ಸುಖಾಸನದಲ್ಲಿ .. ಹಾಯಾಗಿ ಕುಳಿತುಕೊಂಡು ..**
**ಕೈಗಳೆರಡೂ ಸೇರಿಸಿಕೊಂಡು .. ಕಣ್ಣೆರೆಡೂ ಮುಚ್ಚಿಕೊಂಡು ..**
**ಪ್ರಕೃತಿ ಸಹಜವಾಗಿ ನಡೆಯುತ್ತಲಿರುವ ಉಚ್ಛ್ವಾಸ, ನಿಶ್ವಾಸಗಳನ್ನೇ ..**
**ಏಕಧಾರೆಯಾಗಿ .. ಗಮನಿಸುತ್ತಾ ಇರಬೇಕು!**

## ಧ್ಯಾನವನ್ನು ಯಾರಾದರೂ ಮಾಡಬಹುದು
## ಯಾವ ವಯಸ್ಸಿನವರಾದರೂ ಮಾಡಬಹುದು
## ಯಾವ ಸಮಯದಲ್ಲಿಯಾದರೂ ಮಾಡಬಹುದು
## ಯಾವ ಸ್ಥಳದಲ್ಲಿಯಾದರೂ ಮಾಡಬಹುದು.

ಧ್ಯಾನವನ್ನು ನಿಯಮಿತವಾಗಿ ತಪ್ಪದೇ ಮಾಡಬೇಕು....
ಅವರವರ ವಯಸ್ಸಿಗೆ ಅನುಗುಣವಾಗಿ ಪ್ರತಿಯೊಬ್ಬರೂ, ಪ್ರತಿನಿತ್ಯವೂ ಧ್ಯಾನ ಮಾಡಬೇಕು
ಉದಾಹರಣೆಗೆ, ನಿಮ್ಮ ವಯಸ್ಸು ಇಪ್ಪತ್ತು ವರ್ಷಗಳಾಗಿದ್ದರೆ, ಇಪ್ಪತ್ತು ನಿಮಿಷಗಳ ಕಾಲ ಧ್ಯಾನ ಮಾಡಬೇಕು.
ನಿಮ್ಮ ವಯಸ್ಸು ನಲವತ್ತು ವರ್ಷಗಳಾಗಿದ್ದರೆ ನಲವತ್ತು ನಿಮಿಷಗಳ ಕಾಲ
ಹೀಗೆ ವಯಸ್ಸಿಗೆ ಅನುಗುಣವಾಗಿ ಧ್ಯಾನ ಮಾಡಬೇಕು.

**ಧ್ಯಾನ ಕಸ್ತೂರಿ ಮಾಸ ಪತ್ರಿಕೆಗೆ ಚಂದಾದಾರರಾಗಲು ಬ್ಯಾಂಕ್ ಖಾತೆಗೆ ಹಣ ಪಾವತಿಸಿ ಚಂದಾದಾರರಾಗಬಹುದು**

| | | |
|---|---|---|
| **ಬ್ಯಾಂಕ್ ಹೆಸರು** | **: ಭಾರತೀಯ ಸ್ಟೇಟ್ ಬ್ಯಾಂಕ್** | **– State Bank of India** |
| **ಶಾಖೆಯ ಹೆಸರು** | **: ಚಾಮರಾಜಪೇಟೆ ಶಾಖೆ** | **– Chamarajapete Branch** |
| **ಖಾತೆ ಸಂಖ್ಯೆ** | **: 30828057680 : I.F.S.C. ಕೋಡ್** | **– S.B.I.N 0005794** |
| **ಖಾತೆಯ ಹೆಸರು** | **: ಕೆ.ಪಿ.ಡಿ.ಪಿ. ಟ್ರಸ್ಟ್–ಅಕೌಂಟ್–ಧ್ಯಾನ ಕಸ್ತೂರಿ** | **– K.P.D.P. Trust A/c. Dhayana Kasturi** |

ಧ್ಯಾನ ಕಸ್ತೂರಿ ಮಾಸ ಪತ್ರಿಕೆಗೆ ಆನ್‌ಲೈನ್‌ನಲ್ಲಿಯೇ ಚಂದಾದಾರರಾಗಬಹುದು.
ಕನ್ನಡ ಆಧ್ಯಾತ್ಮಿಕ ಪುಸ್ತಕಗಳನ್ನು ಆನ್‌ಲೈನ್‌ನಲ್ಲಿಯೇ ಖರೀದಿಸಬಹುದು. ಇದಕ್ಕಾಗಿ
ನಿಮ್ಮ ಮೊಬೈಲ್ ಬಳಸಿ ಪಕ್ಕದಲ್ಲಿರುವ ಕ್ಯೂ ಆರ್ ಕೋಡನ್ನು ಸ್ಕ್ಯಾನ್ ಮಾಡಿ,
ನಂತರ ಕಾಣಿಸಿಕೊಳ್ಳುವ ಲಿಂಕ್ ಅನ್ನು ಕ್ಲಿಕ್ ಮಾಡಿ.

ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ
**ಕರ್ನಾಟಕ ಪಿರಮಿಡ್ ಧ್ಯಾನ ಪ್ರಚಾರ ಟ್ರಸ್ಟ್ (ರಿ)**
# 1534/1, ಒಂದನೇ ಮಹಡಿ 26ನೇ ಮುಖ್ಯರಸ್ತೆ, ರಾಗಿಗುಡ್ಡ ಆಂಜನೇಯ ದೇವಸ್ಥಾನದ ಹತ್ತಿರ
9ನೇ ಬ್ಲಾಕ್, ಜಯನಗರ, ಬೆಂಗಳೂರು – 560 069
**ವಾಟ್ಸಾಪ್ ಅಥವಾ ಕರೆಮಾಡಿ : 9448883872; 9901598073**

# ಶ್ರೀ ರಾಮಧಾಮ ಧ್ಯಾನಕೇಂದ್ರ

ನಾರಾಯಣಪ್ಪಗಾರ್ಡನ್, ವೈಟ್‌ಫೀಲ್ಡ್, ಬೆಂಗಳೂರು–560 066.
ಸಂಪರ್ಕಿಸಿ : ಹೆಚ್. ಎನ್. ಶ್ರೀನಿವಾಸ, 9449695503
ವಿಜಯಲಕ್ಷ್ಮೀ ಎಸ್.ಎನ್. 80500 82689

## ಶ್ರೀ ರಾಮ ಪಬ್ಲಿಕೇಶನ್ಸ್‌ನಲ್ಲಿ ದೊರೆಯುವ ಪುಸ್ತಕಗಳು

| | | |
|---|---|---|
| 1. | ಅಹಿಂಸೆ & ಶಾಖಾಹಾರ | ರೂ. 20 |
| 2. | ನವವಿಧ ಧರ್ಮಗಳು | ರೂ. 40 |
| 3. | ಸಸ್ಯಾಹಾರವೇ ಮಾನವಾಹಾರ | ರೂ. 20 |
| 4. | ಧ್ಯಾನ | ರೂ. 60 |
| 5. | ವಿದ್ಯಾರ್ಥಿಗಳ ವಿಕಾಸಕ್ಕೆ ಧ್ಯಾನ ವಿದ್ಯೆ | ರೂ. 30 |
| 6. | ಭಾಗವತ ಸನ್ನಿವೇಶಗಳ ಅಂತರಾರ್ಥ | ರೂ. 30 |
| 7. | ಶಿರಿಡಿ ಸಾಯಿ ಸಂದೇಶಗಳು | ರೂ. 30 |
| 8. | ಪ್ರಾಣ ಶಕ್ತಿ | ರೂ.100 |
| 9. | ಜೀವನದ ಸೂಕ್ಷ್ಮಗಳು | ರೂ.100 |
| 10. | ವಿದ್ಯಾರ್ಥಿ ಜೀವನ ಕ್ರಾಂತಿ | ರೂ. 40 |
| 11. | ಸಂಘಂ ಶರಣಂ ಗಚ್ಛಾಮಿ | ರೂ.300 |
| 12. | ತುಳಸಿ ದಳ (I) | ರೂ.200 |
| 13. | ತುಳಸಿ ದಳ (ii) | ರೂ.220 |
| 14. | ಆಶ್ಚರ್ಯ....ಆಶ್ಚರ್ಯ | ರೂ. 40 |
| 15. | ದುಃಖ ನಿವಾರಣೆಯ ಮಾರ್ಗ | ರೂ. 70 |
| 16. | ಧ್ಯಾನದಿಂದಲೇ ಜ್ಞಾನ | ರೂ. 70 |
| 17. | ಬ್ರಹ್ಮಜ್ಞಾನ | ರೂ. 70 |
| 18. | ಜ್ಞಾನ ಜ್ಯೋತಿ | ರೂ. 90 |
| 19. | ಗೈಡಿಂಗ್ | ರೂ.100 |
| 20. | ಸಂಕಲ್ಪವೆಂದರೇನು? | ರೂ. 50 |
| 21. | ಕರ್ಮ ಸಿದ್ಧಾಂತ | ರೂ. 70 |
| 22. | ಜ್ಞಾನ ಕುಸುಮಗಳು | ರೂ. 90 |
| 23. | ಆಲೋಚನಾ ಶಕ್ತಿ | ರೂ. 40 |

| | | |
|---|---|---|
| 24. | ಆತ್ಮವಿಜ್ಞಾನ ಮತ್ತು ಮೃತ್ಯುವೇ ಇಲ್ಲ | ರೂ. 40 |
| 25. | ಆಧ್ಯಾತ್ಮಿಕ ಶಾಸ್ತ್ರ | ರೂ. 40 |
| 26. | ಭಕ್ತಿ ಮುಕ್ತಿ | ರೂ. 30 |
| 27. | ಧ್ಯಾನ ತರಂಗ | ರೂ. 40 |
| 28. | ಜ್ಞಾನ ಯುಗ | ರೂ. 60 |
| 29. | ಸೇತು ವಿಜ್ಞಾನ | ರೂ. 40 |
| 30. | ಮರಣಿಸುವ ಮುಂಚೆಯೇ ಮರಣಿಸಬೇಕು | ರೂ.130 |
| 31. | ಅತೀಂದ್ರಿಯ ಶಕ್ತಿಗಳು | ರೂ. 40 |
| 32. | ನಾವು ಇಹಲೋಕ ವಾಸಿಗಳಾ? ಪರಲೋಕ ವಾಸಿಗಳಾ? | ರೂ. 40 |
| 33. | ಆಲೋಚಿಸಿ | ರೂ. 70 |
| 34. | ನಿರ್ವಾಣ ಮಾರ್ಗ | ರೂ. 60 |
| 35. | ಸತ್ಯ | ರೂ. 40 |
| 36. | ಆರ್ಥಿಕ ಪರಿಸ್ಥಿತಿ | ರೂ. 40 |
| 37. | ಚಕ್ರಗಳು | ರೂ. 30 |
| 38. | ಭೂತದಯೆ ಮತ್ತು ದೈವತ್ವ | ರೂ. 80 |
| 39 | ಮೌನ ಧ್ಯಾನ | ರೂ. 40 |
| 40. | ಗುರವನ್ನು ಗುರುತಿಸುವುದೇ ಹೇಗೆ? | ರೂ. 30 |
| 41 | ತ್ರಿವಿಧಗಳು | ರೂ. 70 |
| 42 | ಮರಣದ ನಂತರ ನಮ್ಮ ಜೊತೆ ಬರುವುದು | ರೂ. 60 |
| 43 | ಧ್ಯಾನವೆಂದರೆ? | ರೂ. |
| 44 | ಮೆಹರ್‌ಬಾಬಾ ಸಂದೇಶ | ರೂ. |
| 45 | | |
| 46 | | |
| 47 | | |
| 48 | | |
| 49 | | |
| 50 | | |



## ಉತ್ತಮ ಗುರುಗಳ ಅರ್ಹತೆಗಳು

ಮುಮುಕ್ಷುಗಳು ಸಾಗರದಲ್ಲಿರುವ ಮುತ್ತಿನ ಚಿಪ್ಪಿನಂತವರು. ಗುರು ಅದರಲ್ಲಿ ವರ್ಷಿಸುವ ಸ್ವಾತಿ ಹನಿಯಂತಹವರು. ಮಳೆಯ ನೀರಿಲ್ಲಿ ಒಂದು ಹನಿಯೊಂದಿಗೆ ದಾಹ ತೀರುತ್ತದೆ. ಆದರೆ ಉಪ್ಪು ನೀರು ಸಮುದ್ರದಲ್ಲಿ ಇದ್ದೂ ಯಾವ ಪ್ರಯೋಜನ ಇರುವುದಿಲ್ಲ. ಆದ್ದರಿಂದ ಮಳೆಯ ನೀರಿನಂತಹ ಉನ್ನತವಾದವನು ಗುರುವು..... ಗುಣ, ರೂಪರಹಿತವಾದ ಪರಬ್ರಹ್ಮ ಸ್ವರೂಪನೇ ಗುರು. ಅಜ್ಞಾನ ಅಂಧಕಾರವನ್ನು ಹೋಗಲಾಡಿಸಿ ಜ್ಞಾನವನ್ನು ಪ್ರಸಾದಿಸುವವನೇ ಗುರು.

ಗುರು, ಜ್ಞಾನಿಯಾಗಿರಬೇಕು, ಗುರು ಕರ್ಮಿಷ್ಟನಾಗಿರಬೇಕು. ಗುರು ಧ್ಯಾನತತ್ಪರನಾಗಿ ಯೋಗಿ ಆಗಿರಬೇಕು. ಗುರುವಾದವನು ಸ್ವಯಂ ಸಾಧಕನಾಗಿರಬೇಕು. ಸಾಧನೆಯಲ್ಲಿರುವ ಕಷ್ಟಸುಖಗಳನ್ನು ಅನುಭವಿಸಿರಬೇಕು.

ಬ್ರಹ್ಮಾನುಭೂತಿಯನ್ನು ರುಚಿ ನೋಡಿರಬೇಕು. ಪ್ರಜ್ಞಾವಂತನಾಗಿರಬೇಕು. ಅಂತಹ ಗುರು ಮಾತ್ರವೇ ಇತರರಿಗೆ ಮಾರ್ಗದರ್ಶಿಯಾಗಬಲ್ಲ. ಇತರರಿಗೆ ಒಳ್ಳೆಯ ಮಾರ್ಗವನ್ನು ತೋರಬಲ್ಲನು.

ರೂ 30/-


**ಪಿರಮಿಡ್ ಸ್ಪಿರಿಚ್ಯುಯಲ್ ಸೊಸೈಟೀಸ್ ಮೂವ್‌ಮೆಂಟ್, ಇಂಡಿಯಾ**

ಧ್ಯಾನದ ಬಗ್ಗೆ ಮತ್ತಷ್ಟು ಸಮಾಚಾರಕ್ಕಾಗಿ ಈ ಕೆಳಗಿನ ವೆಬ್‌ಸೈಟ್ ಸಂದರ್ಶಿಸಿ

https: //www.youtube.com/pmckannada ● www.meditationeverywhere.org ● www.pssmovement.org

**ಶ್ರೀರಾಮ ಪಬ್ಲಿಕೇಶನ್ಸ್**

ಶ್ರೀರಾಮಧಾಮ ಧ್ಯಾನಕೇಂದ್ರ, ನಾರಾಯಣಪ್ಪ ಗಾರ್ಡನ್,
ವೈಟ್ ಫೀಲ್ಡ್, ಬೆಂಗಳೂರು - 560 066
ಸಂಪರ್ಕಿಸಿ : ಹೆಚ್.ಎನ್. ಶ್ರೀನಿವಾಸ, 9449695503
ವಿಜಯಲಕ್ಷ್ಮಿ ಎಸ್.ಎನ್. + 91 80500 82689